# ಝಕಾತ್

(ಇಸ್ಲಾಮೀ ಕರ್ಮಶಾಸ್ತ್ರ)

✍ ಇಬ್ರಾಹೀಮ್ ಸಈದ್

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

# ಮುನ್ನುಡಿ

ಕನ್ನಡ ಭಾಷೆಯಲ್ಲಿ ಇಸ್ಲಾಮಿನ ಆರಾಧನಾ ವಿಧಿಗಳನ್ನು ಸಮಗ್ರವಾಗಿ ವಿವರಿಸುವ ಒಂದು ಗ್ರಂಥದ ಅಗತ್ಯ ಹಲವು ಕಾಲಗಳಿಂದ ಇತ್ತು. "ಇಸ್ಲಾಮೀ ಕರ್ಮಶಾಸ್ತ್ರ" ಎಂಬ ಈ ಗ್ರಂಥದ ಮೂಲಕ ಆ ಅಗತ್ಯವನ್ನು ತಕ್ಕ ಮಟ್ಟಿಗೆ ಪೂರೈಸುವ ಪ್ರಯತ್ನ ಮಾಡಲಾಗಿದೆ. ಇದು ಪ್ರಸಿದ್ಧ ಇಸ್ಲಾಮೀ ವಿದ್ವಾಂಸ ಮೌ| ಮುಹಮ್ಮದ್ ಆಸಿಮ್ ಅಲ್ ಹದ್ದಾದ್ ಅವರು ಬರೆದ 'ಫಿಕ್ಹುಸುನ್ನಃ' ಎಂಬ ಗ್ರಂಥವನ್ನು ಮೂಲಾಧಾರವಾಗಿಟ್ಟು ರಚಿಸಿದ ಒಂದು ಸ್ವತಂತ್ರ ಕೃತಿಯ 5ನೆಯ ಭಾಗವಾಗಿದೆ.

ಕರ್ನಾಟಕದ ಎಲ್ಲ ಮುಸ್ಲಿಮರನ್ನು ದೃಷ್ಟಿಯಲ್ಲಿಟ್ಟು ಪ್ರತಿಯೊಂದು ವಿಧಿಗೂ ಹದೀಸ್‌ನ ಆಧಾರ ನೀಡುವುದರ ಜತೆಗೆ ಇಲ್ಲಿನ ಪ್ರಮುಖ ಕರ್ಮಶಾಸ್ತ್ರ ಪದ್ಧತಿಗಳಾದ ಹನಫಿ, ಶಾಫಿಈ ಗ್ರಂಥಗಳಲ್ಲಿರುವ ವಿಧಿಗಳನ್ನೂ ವಿವರಿಸಲಾಗಿದೆ. ಈ ರೀತಿ ಈ ಗ್ರಂಥವು ಹನಫೀ, ಶಾಫಿಈ ಕರ್ಮಶಾಸ್ತ್ರಗಳನ್ನನುಸರಿಸುವವರಿಗೂ ಅಹ್ಲುಲ್ ಹದೀಸ್‌ಗಳಿಗೂ ಏಕ ಪ್ರಕಾರ ಉಪಯುಕ್ತವಾಗಿದೆ.

ಯಾವುದೇ ಕರ್ಮಶಾಸ್ತ್ರ ಪದ್ಧತಿಯನ್ನು ಅನುಸರಿಸುವವರಿಗೆ ಇತರರ ದೃಷ್ಟಿಕೋನಗಳನ್ನು ಅರಿಯುವ ಮತ್ತು ಆ ಬಗೆಗೆ ಇರುವ ತಪ್ಪು ಕಲ್ಪನೆಗಳನ್ನು ನೀಗಿಸಿಕೊಳ್ಳುವ ಅವಕಾಶವೂ ಈ ಗ್ರಂಥದ ಮೂಲಕ ಲಭಿಸುತ್ತದೆ.

ಸಾಮಾನ್ಯ ಕರ್ಮಶಾಸ್ತ್ರ ಪುಸ್ತಕಗಳಲ್ಲಿರುವಂತೆ ಕೇವಲ ವಿಧಿಗಳನ್ನು ಮಾತ್ರ ವಿವರಿಸುತ್ತಾ ಹೋಗದೆ ಈ ಪುಸ್ತಕದಲ್ಲಿ ಹೆಚ್ಚಿನ ವಿಧಿಗಳನ್ನು ಹದೀಸ್‌ಗಳ ಆಧಾರ ಸಹಿತ ನೀಡಲಾಗಿದೆ. ಅಧಿಕೃತ ಗ್ರಂಥಗಳಿಂದ ಹದೀಸ್‌ಗಳನ್ನು ಉದ್ಧರಿಸುವ ಮೂಲಕ ಪ್ರವಾದಿ ಮುಹಮ್ಮದ್(ಸ) ಅವರ ಅನುಸರಣೆಯ ಸ್ಫೂರ್ತಿ ಬೆಳೆಸಲು ಪ್ರಯತ್ನಿಸಲಾಗಿದೆ. ಅದುವೇ ನಮ್ಮಲ್ಲಿ ಕರ್ಮಶಾಸ್ತ್ರ ವಿಧಿಗಳ ಮೂಲಾಧಾರವಾಗಿದೆ. ಇದು ಗ್ರಂಥದ ಐದನೆಯ ಭಾಗವಾಗಿದ್ದು 'ಝಕಾತ್'ನ ಕುರಿತ ಸಮಗ್ರ ವಿವರಗಳನ್ನು ಒಳಗೊಂಡಿದೆ.

'ಫಿಕ್ಹುಸುನ್ನಃ' ಎಂಬ ಮೂಲ ಗ್ರಂಥದ ರಚನೆಯಲ್ಲಿ 'ಸಿಹಾಹುಸ್ಸಿತ್ತ' ಎಂಬ ಅಧಿಕೃತ ಆರು ಹದೀಸ್‌ಗ್ರಂಥಗಳಲ್ಲದೆ ಇತರ ಹಲವು ಹದೀಸ್ ಗ್ರಂಥಗಳು ಮತ್ತು 'ನೈಲುಲ್ ಔತಾರ್', 'ಹಿದಾಯತುಲ್ ಮುಜ್ತಹಿದ್', 'ಅಲ್ ಫಿಕ್ಹುಅಲಾಮದಾಹಿಬಲ್ ಅರ್‌ಬಅ' ಮುಂತಾದ ಅನೇಕ ಕರ್ಮಶಾಸ್ತ್ರ ಗ್ರಂಥಗಳಿಂದ ಪ್ರಯೋಜನ ಪಡೆಯಲಾಗಿದೆ. ಅಲ್ಲಾಹನು ಇದರ ಪ್ರತಿಫಲವನ್ನು ಆ ಎಲ್ಲ ಹದೀಸ್ ಸಂಗ್ರಹಕಾರರಿಗೂ ಕರ್ಮಶಾಸ್ತ್ರಜ್ಞರಿಗೂ ವಿಶೇಷವಾಗಿ 'ಫಿಕ್ಹುಸುನ್ನಃ'ದ ಗ್ರಂಥಕರ್ತರಿಗೂ ನೀಡಿ ಅನುಗ್ರಹಿಸಲಿ. ಆಮೀನ್.

ಈ ಗ್ರಂಥದಲ್ಲಿ ಪ್ರತಿಯೊಬ್ಬರೂ ಬಾಯಿಪಾಠ ಮಾಡಬೇಕಾದ ಆಯತ್, ದಿಕ್ರ್, ದುಆ, ಸಲಾತ್ ಇತ್ಯಾದಿಗಳನ್ನು ಅರಬಿ ಲಿಪಿಯಲ್ಲಿ ನೀಡುವುದರ ಜೊತೆಗೆ ಅದರ ಕನ್ನಡ ಲಿಪಿಯಂತರವನ್ನೂ ನೀಡಲಾಗಿದೆ. ಅರಬಿ ಲಿಪಿ ಗೊತ್ತಿಲ್ಲದವರು ಅದನ್ನು ಕಲಿಯುವ ಪ್ರಯತ್ನ ಮಾಡುವುದರ ಜೊತೆಗೆ ಅರಬಿ ಬಲ್ಲವರಿಂದ ಸರಿಯಾದ ಉಚ್ಚಾರವನ್ನು ಕಲಿತು ಅದನ್ನು ಕಂಠಪಾಠ ಮಾಡಿಕೊಳ್ಳಬೇಕು.

ಕನ್ನಡ ಓದುಗರಿಗೆ ಇಸ್ಲಾಮೀ ಕರ್ಮಶಾಸ್ತ್ರವನ್ನು ವಿವರಪೂರ್ಣವಾಗಿ ತಿಳಿಯಪಡಿಸುವ ಈ ಪ್ರಯತ್ನದಲ್ಲಿ ನನ್ನ ಜ್ಞಾನದ ಕೊರತೆಯಿಂದಾಗಿ ಅಥವಾ ಪ್ರಮಾದವಶಾತ್ ಬಂದಿರಬಹುದಾದ ಲೋಪದೋಷವನ್ನು ವಿದ್ವಾಂಸರು ಮತ್ತು ಓದುಗರು ಸೂಚಿಸುವ ಸಹೃದಯತೆ ತೋರಿದರೆ ಮುಂದಿನ ಸಂಚಿಕೆಗಳಲ್ಲಿ ಅದನ್ನು ಸರಿಪಡಿಸಲಾಗುವುದು.

ಈ ಪ್ರಯತ್ನವನ್ನು ಬರಹಗಾರನ ಪಾಲಿಗೆ ಒಂದು ಸತ್ಕರ್ಮವಾಗಿ ಮಾಡಲಿ ಮತ್ತು ಅತ್ಯಧಿಕ ಜನರಿಗೆ ಇದರಿಂದ ಪ್ರಯೋಜನ ದೊರಕಲಿ ಎಂದು ಅಲ್ಲಾಹನಲ್ಲಿ ವಿನಮ್ರವಾಗಿ ಪ್ರಾರ್ಥಿಸುತ್ತೇನೆ.

ವಮಾ ತೌಫಿಕೀ ಇಲ್ಲಾ ಬಿಲ್ಲಾಹ್

ಮಂಗಳೂರು
01-06-1998

ವಸ್ಸಲಾಮ್
ಇಬ್ರಾಹೀಮ್ ಸಈದ್

# ಅನುಕ್ರಮಣಿಕೆ


## ಝಕಾತ್‌ನ ಸಾಮಾನ್ಯ ವಿಧಿಗಳು

ಅರ್ಥ ........................................................07
ಕಡ್ಡಾಯ ....................................................07
ಮಹತ್ವ ......................................................08
ಝಕಾತ್ ಕೊಡದಿರುವ ಬಗ್ಗೆ ಎಚ್ಚರಿಕೆ ....................09
ಶರ್ತಗಳು ....................................................11
ಯಾರ ಮೇಲೆಲ್ಲ ಕಡ್ಡಾಯ .....................................12
ಸಾಲಗಾರನ ಝಕಾತ್ ........................................12
ಸಾಲದ ಸೊತ್ತಿನ ಝಕಾತ್ ...................................13
ಮಹಿಳೆಯ ಮಹರ್‌ನ ಝಕಾತ್ .................................14

## ಝಕಾತ್‌ಗೆ ಅರ್ಹರು ಯಾರು?

ಬಡವರು ಮತ್ತು ದರಿದ್ರರು.......................................15
ಝಕಾತ್ ಸಂಗ್ರಹ ಮತ್ತು ವಿತರಣೆಯ ಕಾರ್ಯದಲ್ಲಿ ನಿರತರಾಗಿರುವವರು .....16
ಮನವೊಲಿಸಬೇಕಾದ ಅಗತ್ಯವಿರುವವರು ..........................17
ಕೊರಳನ್ನು ಬಿಡಿಸುವುದಕ್ಕೆ ಅಥವಾ ಜೀತ ಮುಕ್ತಿಗೆ.................18
ಸಾಲಗಾರರಿಗೆ ನೆರವು.............................................19
ಅಲ್ಲಾಹನ ಮಾರ್ಗದ ಹೋರಾಟಕ್ಕೆ...................................19
ಪ್ರಯಾಣಿಕ ........................................................19

## ಯಾವ ಸೊತ್ತಿನ ಮೇಲೆ ಝಕಾತ್ ಕಡ್ಡಾಯ

ಚಿನ್ನ-ಬೆಳ್ಳಿ (ನಗದು) ............................................21
ವ್ಯಾಪಾರದ ಸರಕು ...............................................23
ಕೃಷಿ ಉತ್ಪನ್ನಗಳು ...............................................24

## ಜಾನುವಾರುಗಳ ಝಕಾತ್

ಯಾವ ಜಾನುವಾರುಗಳ ಮೇಲೆ ಝಕಾತ್ ಕಡ್ಡಾಯ.....................27
ಒಂಟೆಯ ಪ್ರಮಾಣ ...............................................27
ದನ ಮತ್ತು ಎಮ್ಮೆಗಳ ಪ್ರಮಾಣ.....................................29
ಆಡು ಮತ್ತು ಕುರಿಗಳ ಪ್ರಮಾಣ ...................................29
ಜಾನುವಾರುಗಳ ಝಕಾತಿನ ಇತರ ವಿಧಿಗಳು .........................29
ಝಕಾತ್ ಅನ್ವಯವಾಗದ ಜಾನುವಾರುಗಳು .........................30

## ಸುಪ್ತ ನಿಧಿ ಮತ್ತು ಖನಿಜ ವಸ್ತುಗಳ ಝಕಾತ್

ಸುಪ್ತ ನಿಧಿ ಮತ್ತು ಖನಿಜ ವಸ್ತುಗಳೆಂದರೇನು? ........................31

ಸುಪ್ತ ನಿಧಿ ಮತ್ತು ಖನಿಜದ ಪ್ರಮಾಣ ಹಾಗೂ ಅದರ ಝಕಾತ್......31
ಝಕಾತ್ ಸಂದಾಯ ಮತ್ತು ವಿತರಣೆ
ಅತಿ ಶೀಘ್ರ ನೀಡಬೇಕು ........................................33
ಝಕಾತ್ ಮುಂಗಡವಾಗಿ ನೀಡುವುದು ..............................33
ಝಕಾತ್ ಸಂಗ್ರಹಿಸಿದಲ್ಲಿಯೇ ವಿತರಿಸಬೇಕು..........................33
ಝಕಾತ್ ನೀಡುವಾಗ ದುಆ ........................................34
ಝಕಾತ್ ಸಂಗ್ರಹಿಸುವಾಗಿನ ದುಆ ................................34
ಝಕಾತ್ ಯಾರಿಗೆ ನೀಡುವುದು ಉತ್ತಮ
ಪತಿ ................................................................35
ತಂದೆ - ತಾಯಿ ಮತ್ತು ಮಕ್ಕಳ ಹೊರತು ಇತರ ಬಂಧುಗಳು...........36
ಝಕಾತ್ ಅಥವಾ ದಾನ ನೀಡಿ ಅದನ್ನು ಖರೀದಿಸುವುದು .................36
ಝಕಾತ್ ವಾರೀಸು ಸೊತ್ತಿನ ರೂಪದಲ್ಲಿ ಸಿಗುವುದು........................36
ಬಹಿರಂಗವಾಗಿ ನೀಡುವುದು .......................................37
ಝಕಾತ್ ಪಡೆಯುವುದು ಯಾರಿಗೆ ನಿಷಿದ್ಧ?
ಸ್ಥಿತಿವಂತ ಮತ್ತು ದುಡಿಯಬಲ್ಲವನು.................................38
ಪ್ರವಾದಿ(ಸ) ಅವರ ಕುಟುಂಬದ ಸದಸ್ಯರು ..............................38
ಫಿತ್ರ್ ಝಕಾತ್
ವಿಧಿ ................................................................41
ಔಚಿತ್ಯ ..............................................................41
ಯಾರ ಮೇಲೆ ಕಡ್ಡಾಯ? ...........................................41
ಫಿತ್ರ್ ಝಕಾತ್‌ನ ಪ್ರಮಾಣ..........................................42
ಫಿತ್ರ್ ಝಕಾತ್ ಯಾವುದನ್ನೆಲ್ಲಾ ಕೊಡಬಹುದು? .........................42
ಫಿತ್ರ್ ಝಕಾತ್ ಯಾವಾಗ ಕಡ್ಡಾಯವಾಗುತ್ತದೆ ..........................42
ಯಾವಾಗ ಪಾವತಿಸಬೇಕು ..........................................43
ಫಿತ್ರ್ ಝಕಾತ್ ಮುಂಗಡವಾಗಿ ನೀಡುವುದು .............................43
ಫಿತ್ರ್ ಝಕಾತ್‌ನ ವ್ಯಯ............................................43
ಐಚ್ಛಿಕ ದಾನ ಧರ್ಮಗಳು
ಮಹತ್ವ ..............................................................44
ಐಚ್ಛಿಕ ದಾನದ ವಿವಿಧ ರೂಪಗಳು.....................................45
ದಾನ ಮಾಡಿ ಮನ ನೋಯಿಸುವುದು ಅಥವಾ ಉಪಕಾರ ಭಾರವಿರಿಸುವುದು .. 46
ನಿಷಿದ್ಧ ಸೊತ್ತಿನ ದಾನ ............................................47
ಪತ್ನಿ ಮತ್ತು ಪತಿಯ ಸೊತ್ತಿನಿಂದ ದಾನ ಮಾಡುವುದು .....................48

# ಝಕಾತ್‌ನ ಸಾಮಾನ್ಯ ವಿಧಿಗಳು

## 1. ಅರ್ಥ

ಝಕಾತ್‌ನ ಶಬ್ದಕೋಶಾರ್ಥ 'ವೃದ್ಧಿಸು' ಮತ್ತು 'ಶುದ್ಧವಾಗು' ಎಂದಾಗಿದೆ. ಶರೀಅತ್‌ನಲ್ಲಿ ಒಬ್ಬ ವ್ಯಕ್ತಿಯು ಅಲ್ಲಾಹನು ನೀಡಿದ ಸೊತ್ತಿನಿಂದ ಅದರ ಹಕ್ಕುದಾರರಿಗಾಗಿ ತೆಗೆಯುವ ಸೊತ್ತಿಗೆ 'ಝಕಾತ್' ಎನ್ನುತ್ತಾರೆ. ಅದರಿಂದ ಮನುಷ್ಯನ ಸೊತ್ತು ಶುದ್ಧವಾಗುತ್ತದೆ ಹಾಗೂ ಅದು ಗಾತ್ರ ಮತ್ತು ಪುಣ್ಯಫಲದ ದೃಷ್ಟಿಯಿಂದ ವೃದ್ಧಿಸುತ್ತದೆಯಾದುದರಿಂದ ಅದನ್ನು ಝಕಾತ್ ಎನ್ನಲಾಗುತ್ತದೆ. ಅಲ್ಲಾಹನು ಈ ರೀತಿ ಹೇಳಿರುವನು:

قَدْ أَفْلَحَ مَن زَكَّاهَا

"ತನ್ನನ್ನು ಸಂಸ್ಕರಿಸಿಕೊಂಡ ವ್ಯಕ್ತಿ ಯಶಸ್ವಿಯಾದನು." (ಅಶ್ಯಮ್ಸ್: 9)

ಪ್ರವಾದಿ(ಸ) ಈ ರೀತಿ ಹೇಳಿರುವರು:

مَا نَقَصَ مَالٌ مِنْ صَدَقَةٍ

"ಯಾವುದೇ ಸಂಪತ್ತು ದಾನ-ಧರ್ಮದಿಂದ ಕಡಿಮೆಯಾಗಿಲ್ಲ." (ನೈಲುಲ್ ಔತಾರ್)

## 2. ಕಡ್ಡಾಯ

ಇಸ್ಲಾಮ್ ಧರ್ಮದ ಐದು ಸ್ಥಂಭಗಳ ಪೈಕಿ ಝಕಾತ್ ಒಂದು ಪ್ರಮುಖ ಸ್ಥಂಭವಾಗಿದೆ. ಅದು ಕಡ್ಡಾಯವೆಂಬುದು ಕುರ್‌ಆನ್, ಸುನ್ನತ್ ಮತ್ತು ಸಮುದಾಯದ ಒಮ್ಮತಾಭಿಪ್ರಾಯದಿಂದ ಸಾಬೀತಾಗಿದೆ. ಪವಿತ್ರ ಕುರ್‌ಆನಿನಲ್ಲಿ ಪದೇ ಪದೇ "ನಮಾಝ್ ಸಂಸ್ಥಾಪಿಸಿರಿ ಮತ್ತು ಝಕಾತ್ ನೀಡಿರಿ" ಎಂದು ಹೇಳಲಾಗಿದೆ. ಪ್ರವಾದಿ(ಸ) ಈ ರೀತಿ ಹೇಳಿರುವರು: ಇಸ್ಲಾಮಿನ ಬುನಾದಿಯನ್ನು ಐದು ವಸ್ತುಗಳ ಮೇಲೆ ಇಡಲಾಗಿದೆ- "ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದುರ್ರಸೂಲುಲ್ಲಾಹ್ ಎಂಬುದರ ಸಾಕ್ಷ್ಯವಹಿಸುವುದು, ನಮಾಝ್ ಸಂಸ್ಥಾಪಿಸುವುದು, ಝಕಾತ್ ನೀಡುವುದು, ಅಲ್ಲಾಹನ ಭವನದ ಹಜ್ಜ್ ಮಾಡುವುದು ಮತ್ತು ರಮಝಾನ್ ತಿಂಗಳ ಉಪವಾಸ ವ್ರತ ಆಚರಿಸುವುದು." (ಬುಖಾರಿ, ಮುಸ್ಲಿಮ್)

ಝಕಾತ್ ಇಸ್ಲಾಮಿನ ಸ್ಥಂಭವಾಗಿದೆ ಎಂಬುದನ್ನು ಇಂದಿನ ತನಕ ಯಾರೂ ನಿರಾಕರಿಸಲಿಲ್ಲ.

## 3. ಮಹತ್ವ

ಅಲ್ಲಾಹನು ಈ ರೀತಿ ಹೇಳಿರುವನು:

خُذْ مِنْ أَمْوَالِهِمْ صَدَقَةً تُطَهِّرُهُمْ وَتُزَكِّيهِم بِهَا

"ಸಂದೇಶವಾಹಕರೇ! ನೀವು ಅವರ ಸಂಪತ್ತುಗಳಿಂದ ಸದಕಗಳನ್ನು(ಝಕಾತ್ ಮತ್ತು ದಾನ-ಧರ್ಮ) ಪಡೆದು ಅವರನ್ನು ಶುದ್ಧೀಕರಿಸಿರಿ." (ಅತ್ತೌಬಃ : 103)

ಇನ್ನೊಂದೆಡೆ ಹೀಗೆ ಹೇಳಲಾಗಿದೆ:

الَّذِينَ إِن مَّكَّنَّاهُمْ فِي الْأَرْضِ أَقَامُوا الصَّلَاةَ وَآتَوُا الزَّكَاةَ

وَأَمَرُوا بِالْمَعْرُوفِ وَنَهَوْا عَنِ الْمُنكَرِ وَلِلَّهِ عَاقِبَةُ الْأُمُورِ

"ಇವರು ಎಂಥವರೆಂದರೆ ನಾವು ಇವರಿಗೆ ಭೂಮಿಯಲ್ಲಿ ಅಧಿಕಾರ ಪ್ರದಾನ ಮಾಡಿದರೆ ಇವರು ನಮಾಝ್ ಸಂಸ್ಥಾಪಿಸುವರು, ಝಕಾತ್ ಕೊಡುವರು, ಒಳಿತಿನ ಆಜ್ಞೆ ಕೊಡುವರು ಮತ್ತು ಕೆಡುಕಿನಿಂದ ತಡೆಯುವರು, ಸಕಲ ವ್ಯವಹಾರಗಳ ಅಂತಿಮ ಪರಿಣಾಮವು ಅಲ್ಲಾಹನ ಕೈಯಲ್ಲಿದೆ." (ಅಲ್ ಹಜ್ಜ್ : 41)

ಅರ್ಥಾತ್: ಮುಸ್ಲಿಮರಿಗೆ ಭೂಮಿಯ ಮೇಲೆ ಪ್ರಾಬಲ್ಯ ಮತ್ತು ಅಧಿಕಾರ ದಯಪಾಲಿಸುವುದರ ಒಂದು ದೊಡ್ಡ ಉದ್ದೇಶ ಝಕಾತ್‌ನ ವ್ಯವಸ್ಥೆಯನ್ನು ಸ್ಥಾಪಿಸುವುದು ಕೂಡಾ ಆಗಿದೆ.

ಪ್ರವಾದಿ(ಸ) ಹ. ಮುಆದ್(ರ) ಅವರನ್ನು ಯಮನ್‌ಗೆ ಕಳುಹಿಸುತ್ತಾ, ಈ ರೀತಿ ಹೇಳಿರುವರು:

"ನೀವು ಗ್ರಂಥದವರ ಒಂದು ಜನಾಂಗದ ಕಡೆಗೆ ಹೋಗುತ್ತಿರುವಿರಿ. ಅಲ್ಲಾಹನಲ್ಲದೆ ಅನ್ಯ ಆರಾಧ್ಯರಿಲ್ಲ ಮತ್ತು ನಾನು [ಮುಹಮ್ಮದ್(ಸ)] ಅಲ್ಲಾಹನ ಪ್ರವಾದಿಯಾಗಿರುವೆನೆಂಬುದರ ಸಾಕ್ಷ್ಯವಹಿಸುವಂತೆ ಅವರಿಗೆ ಕರೆ ನೀಡಿರಿ. ಒಂದು ವೇಳೆ ಅವರು ನಿಮ್ಮ ಕರೆಯನ್ನು ಸ್ವೀಕರಿಸಿದರೆ, ಅಲ್ಲಾಹನು ಅವರ ಮೇಲೆ ಹಗಲು-ರಾತ್ರಿಗಳಲ್ಲಿ ಐದು ನಮಾಝ್‌ಗಳನ್ನು ಕಡ್ಡಾಯಗೊಳಿಸಿರುವನೆಂದು ಹೇಳಿರಿ. ಅವರು ನಿಮ್ಮನ್ನು ಅನುಸರಿಸಿದರೆ ಅಲ್ಲಾಹನು ಅವರ ಮೇಲೆ ಸದಕಾ(ಝಕಾತ್) ಕಡ್ಡಾಯಗೊಳಿಸಿರುವನೆಂದು ಹೇಳಿರಿ. ಅದನ್ನು ಅವರ ಸಿರಿವಂತರಿಂದ ಶೇಖರಿಸಿ ಅವರ ಬಡವರಿಗೆ ವಿತರಿಸಲಾಗುವುದು. ಅವರು ನಿಮ್ಮನ್ನು ಅನುಸರಿಸಿದರೆ ಅವರ ಒಳ್ಳೆಯ ಸೊತ್ತನ್ನು ಹೆಕ್ಕಿ ಪಡೆಯಬೇಡಿರಿ. (ಮಧ್ಯಮ ದರ್ಜೆಯ ಸೊತ್ತನ್ನೇ ಪಡೆಯಿರಿ) ಮರ್ದಿತನ ಶಾಪವನ್ನು ಭಯಪಡಿರಿ. ಏಕೆಂದರೆ ಅವನ ಮತ್ತು ಅಲ್ಲಾಹನ ಮಧ್ಯೆ ಯಾವುದೇ ತಡೆ ಇರುವುದಿಲ್ಲ."

(ವರದಿ: ಹ. ಇಬ್ನು ಅಬ್ಬಾಸ್(ರ)- ಬುಖಾರಿ, ಮುಸ್ಲಿಮ್, ಅಹ್ಮದ್, ಅಬೂ ದಾವೂದ್, ತಿರ್ಮಿದಿ, ನಸಾಈ, ಇಬ್ನು ಮಾಜಃ)

ಪ್ರವಾದಿ(ಸ) ಹೀಗೆ ಹೇಳಿರುವರು:

ನಾನು ಮೂರು ವಿಷಯಗಳ ಬಗ್ಗೆ ಆಣೆ ಹಾಕುತ್ತೇನೆ ಮತ್ತು ನಿಮಗೆ ಒಂದು ಹದೀಸನ್ನು ವಿವರಿಸುತ್ತೇನೆ. ಅದನ್ನು ನೆನಪಿಡಿರಿ.

1. ದಾನದಿಂದ ಯಾವ ಸೊತ್ತಿನಲ್ಲೂ ಕಡಿತವಾಗುವುದಿಲ್ಲ.

2. ಒಬ್ಬನ ಮೇಲೆ ಅನ್ಯಾಯ ಆದರೂ ಅವನು ಆ ಬಗ್ಗೆ ಸಹನೆ ಕೈಗೊಂಡರೆ ಅಲ್ಲಾಹನು ಅವನ ಪಾಲಿಗೆ ಗೌರವದ ದ್ವಾರವನ್ನು ತೆರೆಯುತ್ತಾನೆ.

3. ಒಬ್ಬನು ತನ್ನ ಮೇಲೆ ಭಿಕ್ಷಾಟನೆಯ ದ್ವಾರವನ್ನು ತೆರೆದುಕೊಂಡರೆ ಅಲ್ಲಾಹನು ಅವನ ಮೇಲೆ ದಾರಿದ್ರ್ಯದ ಬಾಗಿಲನ್ನು ತೆರೆಯುತ್ತಾನೆ.

(ವರದಿ: ಹ.ಅಬೂ ಕಬ್ಶಾ(ರ)- ತಿರ್ಮಿದಿ)

## 4. ಝಕಾತ್ ಕೊಡದಿರುವ ಬಗ್ಗೆ ಎಚ್ಚರಿಕೆ

ಅಲ್ಲಾಹನು ಈ ರೀತಿ ಆದೇಶಿಸಿರುವನು-

وَالَّذِينَ يَكْنِزُونَ الذَّهَبَ وَالْفِضَّةَ وَلَا يُنفِقُونَهَا فِي
سَبِيلِ اللَّهِ فَبَشِّرْهُم بِعَذَابٍ أَلِيمٍ ﴿٣٤﴾ يَوْمَ يُحْمَىٰ عَلَيْهَا
فِي نَارِ جَهَنَّمَ فَتُكْوَىٰ بِهَا جِبَاهُهُمْ وَجُنُوبُهُمْ وَظُهُورُهُمْ
هَٰذَا مَا كَنَزْتُمْ لِأَنفُسِكُمْ فَذُوقُوا مَا كُنتُمْ تَكْنِزُونَ ﴿٣٥﴾

ಚಿನ್ನವನ್ನೂ ಬೆಳ್ಳಿಯನ್ನೂ ಸಂಗ್ರಹಿಸಿಟ್ಟು ಅವುಗಳನ್ನು ದೇವ ಮಾರ್ಗದಲ್ಲಿ ಖರ್ಚು ಮಾಡದವರಿಗೆ ವೇದನಾಯುಕ್ತ ಯಾತನೆಯ ಸುವಾರ್ತೆ ನೀಡಿರಿ. ಈ ಚಿನ್ನ-ಬೆಳ್ಳಿಗಳ ಮೇಲೆ ನರಕಾಗ್ನಿಯನ್ನು ಉರಿಸಲಾಗುವುದು. ತರುವಾಯ ಅದರಿಂದಲೇ ಅವರ ಹಣೆಗಳಿಗೂ ಪಾರ್ಶ್ವಗಳಿಗೂ ಬೆನ್ನುಗಳಿಗೂ ಬರೆ ಹಾಕಲಾಗುವುದು. "ನೀವು ನಿಮಗಾಗಿ ಸಂಗ್ರಹಿಸಿಟ್ಟಿದ್ದ ಸಂಪತ್ತು ಇದುವೇ. ಈಗ ನೀವು ಕೂಡಿ ಹಾಕಿದ್ದ ಸಂಪತ್ತನ್ನು ಸವಿಯಿರಿ." (ಎನ್ನಲಾಗುವುದು)

(ಅತ್ತೌಬಃ : 34-35)

ಪ್ರವಾದಿ(ಸ) ಹೀಗೆ ಹೇಳಿರುವರು:

ಯಾರಿಗೆ ಅಲ್ಲಾಹನು ಸಂಪತ್ತು ದಯಪಾಲಿಸಿದ್ದು ಅವನು ಅದರ ಝಕಾತ್ ನೀಡಲಿಲ್ಲವೋ... ಕಿಯಾಮತ್‌ನಂದು ಅವನ ಅದೇ ಸಂಪತ್ತು ಕಣ್ಣುಗಳ ಮೇಲೆ ಎರಡು ಕರಿಯ ಕಲೆ ಇರುವಂತಹ ಒಂದು ಹೆಬ್ಬಾವಿನ ರೂಪದಲ್ಲಿ ಅವನ ಮುಂದೆ ಬರುವುದು. ಅದು ಅವನನ್ನು ತನ್ನ ಎರಡು ದವಡೆಗಳಿಂದ ಹಿಡಿದು "ನಾನೇ ನಿನ್ನ ಭಂಡಾರ, ನಾನೇ ನಿನ್ನ ಸಂಪತ್ತು" ಎನ್ನುವುದು. ಅನಂತರ ಪ್ರವಾದಿ(ಸ) ಈ ಆಯತನ್ನು ಪಠಿಸಿದರು:

وَلَا يَحْسَبَنَّ الَّذِينَ يَبْخَلُونَ بِمَا آتَاهُمُ اللَّهُ مِنْ فَضْلِهِ هُوَ خَيْرًا
لَهُمْ بَلْ هُوَ شَرٌّ لَهُمْ سَيُطَوَّقُونَ مَا بَخِلُوا بِهِ يَوْمَ الْقِيَامَةِ

"ಯಾರಿಗೆ ಅಲ್ಲಾಹನು ತನ್ನ ಅನುಗ್ರಹವನ್ನು ದಯಪಾಲಿಸಿರುವನೋ ಮತ್ತು ಅವರು ಜಿಪುಣತೆ ತೋರುವವರೋ, ಈ ಜಿಪುಣತೆಯು ಅವರ ಪಾಲಿಗೆ ಒಳಿತೆಂದು ಅವರು ಭಾವಿಸದಿರಲಿ. ಅದು ಅವರ ಪಾಲಿಗೆ ಅತ್ಯಂತ ಕೆಟ್ಟದಾಗಿದೆ. ಯಾವುದನ್ನು ಅವರು ಜಿಪುಣತೆಯಿಂದ ಶೇಖರಿಸುತ್ತಿರುವರೋ ಅದು ಕಿಯಾಮತ್‌ನಂದು ಅವರ ಕೊರಳಿನ ಪಟ್ಟಿಯಾಗಿ ಮಾರ್ಪಡುವುದು." (ಆಲಿ ಇಮ್ರಾನ್: 180)

(ವರದಿ: ಹ. ಅಬೂ ಹುರೈರಾ(ರ)- ಬುಖಾರಿ, ಮುಸ್ಲಿಮ್)

"ಅಲ್ಲಾಹನಲ್ಲದೆ ಅನ್ಯ ಆರಾಧ್ಯನಿಲ್ಲ ಮತ್ತು ಮುಹಮ್ಮದ್(ಸ) ಅಲ್ಲಾಹನ ಪ್ರವಾದಿಯಾಗಿದ್ದಾರೆಂದು ಜನರು ಸಾಕ್ಷ್ಯ ನುಡಿಯುವ, ನಮಾಝ್ ಸಂಸ್ಥಾಪಿಸುವ ಮತ್ತು ಝಕಾತ್ ಕೊಡುವ ತನಕ ನಾನು ಅವರೊಡನೆ ಹೋರಾಡಬೇಕೆಂದು ನನಗೆ (ಅಲ್ಲಾಹನ ವತಿಯಿಂದ) ಆಜ್ಞಾಪಿಸಲಾಗಿದೆ. ಅವರು ಹಾಗೆ ಮಾಡಿದ ನಂತರ ನನ್ನಿಂದ ಅವರ ಸೊತ್ತು ಮತ್ತು ಪ್ರಾಣವು ಸುರಕ್ಷಿತವಾಗಿರುವುದು. ಇಸ್ಲಾಮ್ ಅದನ್ನು ಬಯಸುವ ಹೊರತು ಮತ್ತು ಅವರ ವಿಚಾರಣೆಯು ಅಲ್ಲಾಹನ ಹೊಣೆಯಲ್ಲಿರುವುದು."

(ವರದಿ: ಹ. ಅಬ್ದುಲ್ಲಾ ಬಿನ್ ಉಮರ್(ರ)- ಬುಖಾರಿ, ಮುಸ್ಲಿಮ್, ಅಹ್ಮದ್)

ಪ್ರವಾದಿ(ಸ) ಅವರ ನಿಧನಾನಂತರ ಖಿಲಾಫತ್‌ನ ಹೊಣೆ ಹ.ಅಬೂಬಕರ್(ರ) ಅವರ ಹೆಗಲ ಮೇಲೆ ಬಿದ್ದಾಗ ಅರೇಬಿಯಾದ ಕೆಲವು ಜನರು ಇಸ್ಲಾಮ್ ಧರ್ಮವನ್ನು ತೊರೆದರು. (ಹ. ಅಬೂಬಕರ್(ರ) ಅವರ ವಿರುದ್ಧ ಯುದ್ಧ ಮಾಡಲು ನಿರ್ಧರಿಸಿದರು) ಆಗ ಹ.ಉಮರ್(ರ) ಹೀಗೆ ಹೇಳಿದರು: ತಾವು ಅವರ ವಿರುದ್ಧ ಯುದ್ಧ ಹೂಡುವುದೆಂತು ಪ್ರವಾದಿ(ಸ) ಹೀಗೆ ಹೇಳಿರುವರಲ್ಲವೇ?

"ಜನರು ಅಲ್ಲಾಹನಲ್ಲದೆ ಅನ್ಯ ಆರಾಧ್ಯರಿಲ್ಲ ಎಂದು ಸಾಕ್ಷ್ಯವಹಿಸುವ ತನಕ ಅವರ ವಿರುದ್ಧ ಹೋರಾಡುತ್ತಿರಬೇಕೆಂದು ನನಗೆ ಆದೇಶಿಸಲಾಗಿದೆ. ಯಾರು ಈ ಸಾಕ್ಷ್ಯವಹಿಸಿದರೋ ಅವರು ತನ್ನ ಸೊತ್ತು ಮತ್ತು ಪ್ರಾಣವನ್ನು ನನ್ನಿಂದ ರಕ್ಷಿಸಿಕೊಂಡನು. ಇಸ್ಲಾಮ್ ಅವನ ರಕ್ತವನ್ನು ಬಯಸುವ ಹೊರತು. ಅವನ ವಿಚಾರಣೆಯು ಅಲ್ಲಾಹನ ಹೊಣೆಯಲ್ಲಿದೆ."

ಆಗ ಹ.ಅಬೂಬಕರ್(ರ) ಹೇಳಿದರು:

"ಅಲ್ಲಾಹನಾಣೆ! ನಮಾಝ್ ಮತ್ತು ಝಕಾತ್‌ನ ಮಧ್ಯೆ ತಾರತಮ್ಯ ಮಾಡಿದವರ ವಿರುದ್ಧ ನಾನು ಖಂಡಿತ ಹೋರಾಡುವೆನು. ಏಕೆಂದರೆ ಝಕಾತ್ ಅಲ್ಲಾಹನ ಹಕ್ಕಾಗಿದೆ. ಅಲ್ಲಾಹನಾಣೆ! ಅವರು ಪ್ರವಾದಿವರ್ಯರಿಗೆ ನೀಡುತ್ತಿದ್ದ ಒಂಟೆಯ ಒಂದು ಹಗ್ಗವನ್ನಾದರೂ ನನ್ನಿಂದ ತಡೆದಿರಿಸಿದರೆ ನಾನು ಅವರ ವಿರುದ್ಧ ಹೋರಾಡುವೆನು." ಆಗ ಹ.ಉಮರ್(ರ) ಹೇಳಿದರು:

"ಈ ಹೋರಾಟದ ಬಗ್ಗೆ ಹ.ಅಬೂಬಕರ್(ರ) ಅವರಿಗೆ ಅಲ್ಲಾಹನು ಅವರ ಹೃದಯ ಬಿಚ್ಚಿರುವನು ಮತ್ತು ಅವರ ನಿಲುವು ಸರಿಯಾಗಿದೆ ಎಂದು ಆ ಕೂಡಲೇ ನನಗೆ ಮನವರಿಕೆಯಾಯಿತು."

(ವರದಿ: ಹ.ಅಬೂ ಹುರೈರಾ(ರ), ಬುಖಾರಿ, ಮುಸ್ಲಿಮ್, ಅಬೂ ದಾವೂದ್, ಅಹ್ಮದ್, ನಸಾಈ, ಇಬ್ನು ಮಾಜಃ)

ಈ ಹದೀಸನ್ನು ಉದ್ಧರಿಸಿದ ಬಳಿಕ ಇಮಾಮ್ ಖತ್ತಾಬೀ(ರ) ಅವರು ಹೀಗೆ ಬರೆದಿರುವರು: ಹ. ಅಬೂಬಕರ್(ರ) ಅವರು ನಾಲ್ಕು ವಿಧದ ಜನರ ವಿರುದ್ಧ ಯುದ್ಧ ಮಾಡಿದರು.

1. ಇಸ್ಲಾಮ್ ಧರ್ಮವನ್ನೇ ತೊರೆದವರು.

2. ಇಸ್ಲಾಮ್ ಧರ್ಮವನ್ನು ಪೂರ್ಣವಾಗಿ ನಿರಾಕರಿಸದೆ ನಮಾಝ್ ಮತ್ತು ಝಕಾತ್‌ಗಳನ್ನು ನಿರಾಕರಿಸಿದವರು.

3. ನಮಾಝ್ ಮಾಡುತ್ತಿದ್ದರೂ ಝಕಾತನ್ನು ನಿರಾಕರಿಸಿದವರು.

4. ಝಕಾತನ್ನೂ ನೀಡುತ್ತಿದ್ದವರು, ಆದರೆ ಅದನ್ನು ಬೈತುಲ್ ಮಾಲ್(ಇಸ್ಲಾಮೀ ಸರಕಾರದ ಖಜಾನೆ)ಗೆ ನೀಡಲು ನಿರಾಕರಿಸಿದವರು. (ಮುಆಲಿಮುಸ್ಸುನನ್)

## 5. ಶರ್ತಗಳು

ಯಾವುದೇ ಸೊತ್ತಿನ ಮೇಲೆ ಝಕಾತ್ ಕಡ್ಡಾಯವಾಗಲು ಎರಡು ಶರ್ತಗಳಿವೆ.

1. ಅದು ಝಕಾತ್‌ನ ನಿಸಾಬ್(ಪ್ರಮಾಣ)ನಷ್ಟು ಅಥವಾ ಅದಕ್ಕಿಂತ ಹೆಚ್ಚು ಇರಬೇಕು. ಶರೀಅತ್‌ನಲ್ಲಿ ವಿವಿಧ ವಸ್ತುಗಳ ಝಕಾತ್‌ಗೆ ನಿರ್ದಿಷ್ಟ ಪಡಿಸಿರುವ ಕನಿಷ್ಠ ಪ್ರಮಾಣಕ್ಕೆ 'ನಿಸಾಬ್' ಎನ್ನಲಾಗುತ್ತದೆ.

2. ಅದಕ್ಕೆ ಒಂದು (ಹಿಜರಿ) ವರ್ಷ ಸಂದಿರಬೇಕು. ಪ್ರವಾದಿ(ಸ) ಈ ರೀತಿ ಹೇಳಿರುವರು:

"ಯಾವುದೇ ಸೊತ್ತಿನ ಮೇಲೆ ಒಂದು ವರ್ಷ ಕಳೆಯದೆ ಇದ್ದರೆ ಅದರ ಮೇಲೆ ಝಕಾತ್ ಇಲ್ಲ." (ವರದಿ: ಹ. ಅಲೀ(ರ)- ಅಬೂ ದಾವೂದ್)

ಆದರೆ ಕೃಷಿ ಉತ್ಪನ್ನಗಳಿಗೆ ಒಂದು ವರ್ಷದ ಶರ್ತವಿಲ್ಲ. ಅದರ ಝಕಾತನ್ನು ಬೆಳೆ ಕೊಯ್ದು ಶುದ್ಧಗೊಳಿಸಿದಾಗಲೇ ನೀಡಬೇಕು.

ಅಲ್ಲಾಹನು ಈ ರೀತಿ ಆದೇಶಿಸಿರುವನು:

وَآتُوا حَقَّهُ يَوْمَ حَصَادِهِ

"ಅದರ ಬೆಳೆ ಕೊಯ್ದಾಗ ಅಲ್ಲಾಹನ ಹಕ್ಕನ್ನೂ ಸಂದಾಯ ಮಾಡಿರಿ."

(ಅಲ್ ಅನ್‌ಆಮ್: 141)

ಅದೇ ರೀತಿ ಗನಿ ಮತ್ತು ಖನಿಜ ಸಂಪತ್ತಿನ ಝಕಾತ್‌ಗೆ ಕೂಡ ಒಂದು ವರ್ಷ ಆಗಬೇಕೆಂಬ ಶರ್ತವಿಲ್ಲ. ಇದೆಲ್ಲವೂ ಸರ್ವಸಮ್ಮತ ವಿಷಯಗಳಾಗಿವೆ.

## 6. ಯಾರ ಮೇಲೆಲ್ಲಾ ಕಡ್ಡಾಯ?

ಮೇಲೆ ಉದ್ಧರಿಸಿದ ಶರ್ತಗಳು ಪೂರ್ಣಗೊಂಡ ಸೊತ್ತನ್ನು ಹೊಂದಿರುವ ಪ್ರತಿಯೊಬ್ಬ ಸ್ವತಂತ್ರ ಮುಸ್ಲಿಮ್ ಸ್ತ್ರೀ, ಪುರುಷರ ಮೇಲೆ ಝಕಾತ್ ಕಡ್ಡಾಯವಾಗಿದೆ. ಈ ಬಗ್ಗೆ ಯಾವುದೇ ಭಿನ್ನಾಭಿಪ್ರಾಯವಿಲ್ಲ.

ಸೊತ್ತಿನ ಒಡೆಯನು ಅಪ್ರಾಪ್ತ ವಯಸ್ಕ, ಮಗು ಅಥವಾ ಬುದ್ಧಿಮಾಂದ್ಯ ವ್ಯಕ್ತಿಯಾಗಿದ್ದರೂ ಝಕಾತ್ ಕಡ್ಡಾಯವಾಗುತ್ತದೆ. ಅದನ್ನು ಅವರ ಸಂರಕ್ಷಕರು ಪಾವತಿಸಬೇಕು.

ಪ್ರವಾದಿ(ಸ) ಹೀಗೆ ಹೇಳಿರುವರು:

"ಅನಾಥನ ಸೊತ್ತಿನ ಸಂರಕ್ಷಕನಾದವನು ಅವನ ಹಣವನ್ನು ವ್ಯಾಪಾರದಲ್ಲಿ ತೊಡಗಿಸಬೇಕು. ಅದನ್ನು ನಿರುಪಯುಕ್ತವಾಗಿ ಬಿಟ್ಟು ಝಕಾತ್ ತಿಂದು ಬಿಡುವಂತೆ ಮಾಡಬಾರದು."

(ವರದಿ: ಹ.ಅಬ್ದುಲ್ಲಾ ಬಿನ್ ಅಮ್ರ್(ರ)- ತಿರ್ಮಿದಿ, ದಾರುಕುತ್ನಿ)

"ಅನಾಥರ ಸೊತ್ತನ್ನು ವ್ಯಾಪಾರದಲ್ಲಿ ತೊಡಗಿಸಿರಿ. ಅದನ್ನು ಝಕಾತ್ ತಿಂದು ಬಿಡಲು ಬಿಡಬೇಡಿರಿ." (ಮುಸ್ನದ್- ಇಮಾಮ್ ಶಾಫಿಈ)

ಈ ಎರಡೂ ವರದಿಗಳು ಅಧಿಕೃತತೆಯ ದೃಷ್ಟಿಯಿಂದ ಬಲಿಷ್ಠವಾಗಿರದಿದ್ದರೂ ಹ. ಉಮರ್, ಅಲೀ, ಇಬ್ನು ಉಮರ್(ರ) ಮತ್ತು ಆಯಿಶಾರ(ರ) ಸಹಿತ ಅನೇಕ ಸಹಾಬಿಗಳು ಇದರಂತೆಯೇ ವರ್ತಿಸುತ್ತಿದ್ದರು.

ಕೆಲವು ಅನಾಥ ಮಕ್ಕಳು ಹ. ಆಯಿಶಾರ(ರ) ಸಂರಕ್ಷಣೆಯಲ್ಲಿದ್ದರು. ಅವರು ಆ ಮಕ್ಕಳ ಸೊತ್ತಿನ ಝಕಾತನ್ನು ಪಾವತಿಸುತ್ತಿದ್ದರು.

(ಮೂವತ್ತ- ಇಮಾಮ್ ಮಾಲಿಕ್)

ಇಮಾಮ್ ಶಾಫಿಈಯವರ(ರ) ನಿಲುವು ಇದುವೇ ಆಗಿದೆ. ಆದರೆ ಇಮಾಮ್ ಅಬೂ ಹನೀಫಾರ(ರ) ಪ್ರಕಾರ ಚಿಕ್ಕ ಮಕ್ಕಳು ಮತ್ತು ಬುದ್ಧಿಮಾಂದ್ಯ ವ್ಯಕ್ತಿಗಳಿಗೆ ಝಕಾತ್ ಅನ್ವಯಿಸುವುದಿಲ್ಲ. ಆದರೆ ಅವರ ಸೊತ್ತಿನಿಂದ ಕೃಷಿಯ ಝಕಾತ್ ನೀಡಬೇಕು.

(ಅಲ್ ಫಿಕ್ಹು ಅಲಲ್ ಮದಾಹಿಬಿಲ್ ಅರ್‌ಬಆ- ಭಾಗ-1, ಪುಟ: 561)

## 7. ಸಾಲಗಾರನ ಝಕಾತ್

ಒಬ್ಬ ವ್ಯಕ್ತಿಯ ಬಳಿ 'ನಿಸಾಬ್'ಗಿಂತಲೂ ಹೆಚ್ಚು ಸೊತ್ತು ಇದ್ದು ಅದಕ್ಕೆ ಒಂದು ವರ್ಷ ಕಳೆದಿದ್ದರೂ ಅವನ ಮೇಲೆ ಸಾಲದ ಭಾರವಿದ್ದು ಅದನ್ನು ತೀರಿಸಿದ ಬಳಿಕ ಸೊತ್ತು 'ನಿಸಾಬ್'ಗಿಂತ ಕಡಿಮೆಯಾಗುವುದಾದರೆ ಇಮಾಮ್ ಅಬೂ ಹನೀಫಾರ(ರ) ಪ್ರಕಾರ ಅವನ ನಗದು, ವ್ಯಾಪಾರದ ಸರಕು ಇತ್ಯಾದಿಗಳಿಗೆ ಝಕಾತ್ ಕಡ್ಡಾಯವಾಗುವುದಿಲ್ಲ. ಆದರೆ ಜಾನುವಾರುಗಳ ಮತ್ತು ಕೃಷಿ ಉತ್ಪನ್ನಗಳ ಝಕಾತ್ ಅವನ ಮೇಲೆ ಕಡ್ಡಾಯವಾಗುತ್ತದೆ.

ಇಮಾಮ್ ಶಾಫಿಈಯವರ(ರ) ಪ್ರಕಾರ ಸಾಲಗಾರನೂ ತನ್ನ ಪೂರ್ಣ ಸೊತ್ತಿನ ಝಕಾತ್

ನೀಡಬೇಕು. ಸಾಲ ಸಂದಾಯ ಮಾಡಿದ ಬಳಿಕ ಅವನ ಸೊತ್ತು ನಿಸಾಬ್‌ಗಿಂತ ಕಡಿಮೆಯಾಗುವುದಿದ್ದರೂ ಸರಿಯೆ.

(ಅಲ್ ಮುಗ್ನೀ, ಹಿದಾಯತುಲ್ ಮಜ್ತಹಿದ್, ಭಾಗ-1, ಪುಟ: 223)

## 8. ಸಾಲದ ಸೊತ್ತಿನ ಝಕಾತ್

ಹನಫೀ ಕರ್ಮಶಾಸ್ತ್ರ ಪಂಡಿತರ ಪ್ರಕಾರ ಸಾಲದ ಮೂರು ರೂಪಗಳಿದ್ದು ಅವುಗಳ ಝಕಾತ್‌ನ ನಿಯಮವು ಭಿನ್ನವಾಗಿದೆ.

### 1) ಖಚಿತ ಸಾಲ

ಇದು ನಗದು ಅಥವಾ ವ್ಯಾಪಾರದ ಸರಕಿನ ಸಾಲವಾಗಿದ್ದು ಸಾಲಗಾರನು ಅದನ್ನು ಒಪ್ಪುವವನಾಗಿರಬೇಕು. ಅವನು ಬಡವನಾಗಿದ್ದರೂ ಸರಿಯೆ. ಈ ಸಾಲದ ಪೈಕಿ 40 ದಿರ್ಹಮ್($10^1/_2$ ತೊಲೆ ಬೆಳ್ಳಿಯ ಮೌಲ್ಯ) ಅಥವಾ ಅದಕ್ಕಿಂತ ಹೆಚ್ಚಿನ ಮೊತ್ತ ಮರಳಿ ದೊರೆತಾಗ ಅವನು ಅದರ ಹಿಂದಿನ ಎಲ್ಲ ವರ್ಷಗಳ ಝಕಾತ್ ಪಾವತಿಸಬೇಕು. ಅದಕ್ಕಿಂತ ಕಡಿಮೆ ದೊರೆತಾಗ ಅವನ ಮೇಲೆ ಝಕಾತ್ ಕಡ್ಡಾಯವಾಗುವುದಿಲ್ಲ. ಸಾಲ ನೀಡಿದವನು ಯಾವಾಗ 'ನಿಸಾಬ್'ನ ಒಡೆಯನಾಗುತ್ತಾನೋ ಆಗಿನಿಂದ ಅವನ ಝಕಾತ್‌ನ ವರ್ಷವನ್ನು ಲೆಕ್ಕ ಹಾಕಲಾಗುವುದು.

### 2) ಮಧ್ಯಮ ಸಾಲ

ತನ್ನ ಒಡೆಯನ ಬಳಿ ಇರುತ್ತಿದ್ದರೆ ಝಕಾತ್ ಅನ್ವಯವಾಗದಂತಹ ವಸ್ತುವಿನ ಬೆಲೆಯು ಸಾಲ ರೂಪದಲ್ಲಿದ್ದರೆ. ಉದಾ: ವಾಸದ ಮನೆ, ತೊಡುವ ಬಟ್ಟೆ ಅಥವಾ ಉಪಯೋಗದ ಪಾತ್ರೆಗಳು ಇತ್ಯಾದಿ. ಈ ಸಾಲವು 'ನಿಸಾಬ್'ನಷ್ಟು ವಸೂಲಿಯಾದಾಗ ಮಾತ್ರ ಝಕಾತ್ ಕಡ್ಡಾಯವಾಗುತ್ತದೆ. ಅವನಿಗೆ 'ನಿಸಾಬ್'ನಷ್ಟು ಅಥವಾ ಅದಕ್ಕಿಂತ ಹೆಚ್ಚು ವಸೂಲಿಯಾದಾಗ ಅವನು ಅದರ ಝಕಾತ್ ಪಾವತಿಸಬೇಕು. ಈ ಸಾಲದಲ್ಲಿಯೂ ಝಕಾತ್‌ನ ವರ್ಷದ ಲೆಕ್ಕವು 'ನಿಸಾಬ್'ನ ಒಡೆಯನಾಗುವ ದಿನದಂದು ಮಾಡಲಾಗುವುದು. ಸಾಲ ಮರು ಪಾವತಿಯಾದ ದಿನದಿಂದ ಅಲ್ಲ.

### 3) ದುರ್ಬಲ ಸಾಲ

ಪತಿಯ ಮೇಲೆ ಸಾಲದ ರೂಪದಲ್ಲಿರುವ ಪತ್ನಿಯ ಮಹರ್ ಅಥವಾ ಮಹಿಳೆಯ ಮೇಲೆ ಸಾಲದ ರೂಪದಲ್ಲಿರುವ 'ಖುಲಾ'ದ ಪರಿಹಾರ ಧನ. ಇದು 'ನಿಸಾಬ್'ನಷ್ಟು ಅಥವಾ ಅದಕ್ಕಿಂತ ಹೆಚ್ಚು ವಸೂಲಾಗಿ ಅದಕ್ಕೆ ಒಂದು ವರ್ಷ ಕಳೆದ ನಂತರವೇ ಅದರ ಮೇಲೆ ಝಕಾತ್ ಕಡ್ಡಾಯವಾಗುವುದು.

ಆದರೆ ಇದೆಲ್ಲವೂ ಸಾಲ ನೀಡಿದವನ ಬಳಿ ಸಾಲದ ಹೊರತು 'ನಿಸಾಬ್'ನಷ್ಟು ಸೊತ್ತು ಇಲ್ಲದಿರುವ ಸ್ಥಿತಿಯಲ್ಲಿ ಮಾತ್ರ. ಒಂದು ವೇಳೆ ಅವನಲ್ಲಿ ನಿಸಾಬ್‌ನಷ್ಟು ಸೊತ್ತು ಇದ್ದರೆ ವಸೂಲಿಯಾಗುವ ಸಾಲದ ಮೊತ್ತವು ಕಡಿಮೆಯಿದ್ದರೂ ಹೆಚ್ಚಿದ್ದರೂ, ಅದು ಯಾವುದೇ ವಿಧದ

ಸಾಲವಾಗಿದ್ದರೂ ಅದನ್ನು ಅವನು ತನ್ನ ಸೊತ್ತಿನೊಂದಿಗೆ ಸೇರಿಸಿ ಪೂರ್ಣ ಸೊತ್ತಿಗೆ ಝುಕಾತ್ ನೀಡಬೇಕು.

(ದುರ್‍ರುಲ್ ಮುಖ್ತಾರ್- ಭಾಗ-2, ಪುಟ:35, ಅಲ್ ಫಿಕ್ಹು ಅಲಲ್ ಮದಾಹಿಬಿಲ್ ಅರ್‌ಬಅ- ಭಾಗ-1, ಪುಟ:575)

ಶಾಫಿಈ ಕರ್ಮಶಾಸ್ತ್ರಜ್ಞರ ಪ್ರಕಾರ ಸಾಲದ ಎರಡು ವಿಧಗಳಿವೆ:

**1) ಖಚಿತ ಸಾಲ**

ಸಾಲಗಾರನು ಒಪ್ಪಿಕೊಳ್ಳುವಂತಹ ಮತ್ತು ಮರು ಪಾವತಿಯಾಗಬಹುದಾದ ಸಾಲ. ಇದರ ಮೇಲೆ ಪ್ರತಿ ವರ್ಷವೂ ಝುಕಾತ್ ಕೊಡಬೇಕು.

**2) ಖಚಿತವಲ್ಲದ ಸಾಲ**

ಸಾಲಗಾರನು ನಿರಾಕರಿಸುವಂತಹ ಸಾಲ, ಇಂತಹ ಸಾಲವು ವಸೂಲಿಯಾಗಿ ಒಂದು ವರ್ಷ ಕಳೆದಾಗ ಮಾತ್ರ ಅದಕ್ಕೆ ಝುಕಾತ್ ಕಡ್ಡಾಯವಾಗುತ್ತದೆ.

ಒಂದು ವೇಳೆ ಸಾಲವು ಜಾನುವಾರು ಅಥವಾ ಆಹಾರ ಪದಾರ್ಥದ ಮೌಲ್ಯವಾಗಿದ್ದರೆ ಅದಕ್ಕೆ ಝುಕಾತ್ ಅನ್ವಯವಾಗುವುದಿಲ್ಲ.

(ಅಲ್ ಫಿಕ್ಹು ಅಲಲ್ ಮದಾಹಿಬಿಲ್ ಅರ್‌ಬಅ-ಭಾಗ-1, ಪುಟ: 575, ಅಲ್ ಮುಗ್ನೀ- ಭಾಗ-2, ಪುಟ:442)

## ಮಹಿಳೆಯ ಮಹರ್‌ನ ಝುಕಾತ್

ಹನಫೀ ಕರ್ಮಶಾಸ್ತ್ರದ ಪ್ರಕಾರ ಮಹಿಳೆಯ ಮಹರ್ ಪತಿಯ ಬಳಿ ಸಾಲದ ರೂಪದಲ್ಲಿದ್ದರೆ ಅದು ಒಂದು 'ದುರ್ಬಲ ಸಾಲ'ವಾಗಿರುವುದರಿಂದ ಝುಕಾತ್‌ನ 'ನಿಸಾಬ್'(ಪ್ರಮಾಣ)ನಷ್ಟು ಹಣ ವಸೂಲಿಯಾಗಿ ಅದಕ್ಕೆ ಒಂದು ವರ್ಷ ಸಂದಾಗ ಮಾತ್ರ ಅದರ ಮೇಲೆ ಝುಕಾತ್ ಕಡ್ಡಾಯವಾಗುತ್ತದೆ. ಆದರೆ ಶಾಫಿಈ ಕರ್ಮಶಾಸ್ತ್ರದ ಪ್ರಕಾರ ಮಹಿಳೆಯ ಮಹರ್ ಪತಿಯ ಮೇಲೆ ಸಾಲದ ರೂಪದಲ್ಲಿದ್ದು ಅದನ್ನು ಅವನು ಅಂಗೀಕರಿಸುತ್ತಾನೆಂದಾದರೆ ಆಕೆ ಅದರ ಝುಕಾತನ್ನು ಪ್ರತಿ ವರ್ಷವೂ ಕೊಡಬೇಕು. ಇದು, ಆ ಸಾಲವು ಯಾವಾಗಲೂ ವಸೂಲಿಯಾಗಬಹುದಾಗಿದ್ದು ಪತ್ನಿಯು ವಸೂಲಿ ಮಾಡದೆ ಇರುವಾಗ ಮಾತ್ರ ಅನ್ವಯವಾಗುತ್ತದೆ.

(ಅಲ್ ಫಿಕ್ಹು ಅಲಲ್ ಮದಾಹಿಬಿಲ್ ಅರ್‌ಬಅ- ಭಾಗ-1, ಪುಟ:575, ಅಲ್ ಮುಗ್ನೀ- ಭಾಗ-2, ಪುಟ:447)

❖❖

# ಝಕಾತ್‌ಗೆ ಅರ್ಹರು ಯಾರು?

ಝಕಾತ್ ಪಡೆಯಲು ಎಂಟು ವಿಧದ ಜನರು ಅರ್ಹರಾಗಿದ್ದಾರೆ. ಅವರೆಲ್ಲರ ಪ್ರಸ್ತಾಪ ಪವಿತ್ರ ಕುರ್‌ಆನಿನ ಈ ಆಯತ್‌ನಲ್ಲಿದೆ:

إِنَّمَا الصَّدَقَاتُ لِلْفُقَرَاءِ وَالْمَسَاكِينِ وَالْعَامِلِينَ عَلَيْهَا
وَالْمُؤَلَّفَةِ قُلُوبُهُمْ وَفِي الرِّقَابِ وَالْغَارِمِينَ وَفِي
سَبِيلِ اللَّهِ وَابْنِ السَّبِيلِ

"ವಾಸ್ತವದಲ್ಲಿ ಈ ಕಡ್ಡಾಯ ದಾನಗಳು ಬಡವರಿಗೆ, ದರಿದ್ರರಿಗೆ, ಅದರ ಕಾರ್ಯದಲ್ಲಿ ನೇಮಕಗೊಂಡವರಿಗೆ, ಮನವೊಲಿಸಬೇಕಾದ ಅಗತ್ಯವಿರುವವರಿಗೆ, ಕೊರಳು ಬಿಡಿಸುವುದಕ್ಕೆ, ಸಾಲಗಾರರಿಗೆ ನೆರವು ನೀಡಲಿಕ್ಕೆ, ಅಲ್ಲಾಹನ ಮಾರ್ಗದಲ್ಲಿ ಮತ್ತು ಪ್ರಯಾಣಿಕರ ಸಹಾಯಕ್ಕೆ ಖರ್ಚು ಮಾಡಲಿಕ್ಕಾಗಿರುತ್ತದೆ." (ಸೂರಃ ಅತ್ತೌಬಃ : 60)

ಅವರೆಲ್ಲರ ವಿವರವನ್ನು ನಾವು ಈ ಕೆಳಗೆ ಕೊಡುತ್ತಿದ್ದೇವೆ.

## 1,2. ಬಡವರು ಮತ್ತು ದರಿದ್ರರು

ಮೂಲದಲ್ಲಿ 'ಫಕೀರ್' ಮತ್ತು 'ಮಿಸ್ಕೀನ್' ಎಂಬ ಪದಗಳನ್ನು ಬಳಸಲಾಗಿದೆ. ಈ ಎರಡೂ ಪದಗಳು ಸರಿಸುಮಾರು ಸಮಾನಾರ್ಥವನ್ನು ಹೊಂದಿದೆ. 'ಫಕೀರ್' ಎಂದರೆ 'ಅಗತ್ಯ ಉಳ್ಳವನು'. 'ಮಿಸ್ಕೀನ್' ಎಂದರೆ 'ನಿರ್ಗತಿಕ' ಎಂಬುದು ಅವುಗಳ ಶಬ್ದಾರ್ಥ. 'ಮಿಸ್ಕೀನ್'ನ ವಿವರಣೆಯನ್ನು ಪ್ರವಾದಿ ಮುಹಮ್ಮದ್(ಸ) ಹೀಗೆ ಮಾಡಿರುವರು:

"ತನ್ನ ಅಗತ್ಯಕ್ಕೆ ಬೇಕಾದಷ್ಟು ಹಣವನ್ನು ಹೊಂದಿರದವನು, ಸಹಾಯಕ್ಕೆ ಅರ್ಹನೆಂದು ಗುರುತಿಸಲಾಗದವನು ಹಾಗೂ ಎದ್ದು ನಿಂತು ಜನರಲ್ಲಿ ಬೇಡದವನು ಮಿಸ್ಕೀನ್ ಆಗಿದ್ದಾನೆ."
(ಬುಖಾರಿ, ಮುಸ್ಲಿಮ್)

ಸ್ಥಿತಿವಂತನಾದವನು ಝಕಾತ್‌ಗೆ ಅರ್ಹನಲ್ಲ. ಸ್ಥಿತಿವಂತಿಕೆ ಏನೆಂಬುದನ್ನು ಪ್ರವಾದಿ(ಸ) ಅನೇಕ ವಚನಗಳಲ್ಲಿ ವಿವರಿಸಿರುವರು.

1. "ತನ್ನ ಬಳಿ $10^1/_2$ ತೊಲೆ ಚಿನ್ನ ಅಥವಾ ಅದರ ಮೌಲ್ಯದಷ್ಟು ಉಳ್ಳವನು ಬೇಡಿದರೆ ಅವನು ಅತಿರೇಕವೆಸಗಿದಂತೆ."

(ವರದಿ: ಹ.ಅಬೂ ಸಈದ್(ರ)-ಅಹ್ಮದ್, ಅಬೂ ದಾವೂದ್, ನಸಾಈ)

2. "ಒಬ್ಬನು ತನ್ನ ಬಳಿ ನಿರಪೇಕ್ಷಗೊಳಿಸುವಷ್ಟು ವಸ್ತುವನ್ನು ಹೊಂದಿದ್ದೂ ಬೇಡಿದರೆ ಅವನು ನರಕದ ಅಗ್ನಿಯನ್ನು ಒಟ್ಟುಗೂಡಿಸಿದಂತೆ" ಎಂದು ಪ್ರವಾದಿ(ಸ) ಹೇಳಿದಾಗ ಸಹಾಬಿಗಳು

ಕೇಳಿದರು: "ಅವನನ್ನು ನಿರಪೇಕ್ಷಗೊಳಿಸುವ ವಸ್ತು ಯಾವುದು?" ಪ್ರವಾದಿ(ಸ) ಹೇಳಿದರು: "ಅವನ ಮಧ್ಯಾಹ್ನದ ಊಟ ಅಥವಾ ಸಂಜೆಯ ಊಟ." ಇನ್ನೊಂದು ವರದಿಯಲ್ಲಿ 'ಅಥವಾ'ದ ಬದಲು 'ಮತ್ತು' ಎಂಬ ಪದವಿದೆ.

(ವರದಿ: ಹ.ಸಹಲ್ ಬಿನ್ ಹನ್‌ಝಲ(ರ)- ಅಹ್ಮದ್, ಅಬೂ ದಾವೂದ್)

ಯಾಚಿಸುವುದು ಅಥವಾ ಬೇಡುವುದನ್ನು ಖಂಡಿಸುವ ಅನೇಕ ಪ್ರವಾದಿ ವಚನಗಳಿವೆ. ಆ ಪೈಕಿ ಎರಡನ್ನು ಇಲ್ಲಿ ಉಲ್ಲೇಖಿಸುತ್ತೇವೆ.

1. ಯಾರು ತನ್ನ ಸಂಪತ್ತನ್ನು ಹೆಚ್ಚಿಸಲಿಕ್ಕಾಗಿ ಜನರಿಂದ ಬೇಡುತ್ತಾನೋ ಅವನು ನರಕದ ಅಗ್ನಿಯನ್ನು ಬೇಡುತ್ತಾನೆ. ಅವನು ಬೇಕಾದರೆ ಅದನ್ನು ಹೆಚ್ಚು ಸಂಗ್ರಹಿಸಲಿ ಅಥವಾ ಕಡಿಮೆ ಸಂಗ್ರಹಿಸಲಿ. ಅವನಿಗೆ ಅದರ ಅಧಿಕಾರವಿದೆ.

(ವರದಿ: ಹ.ಅಬೂ ಹುರೈರಾ(ರ)- ಮುಸ್ಲಿಮ್, ಅಹ್ಮದ್, ಇಬ್ನು ಮಾಜಃ)

2. ನಿಮ್ಮ ಪೈಕಿ ಯಾರಾದರೂ ಬೆಳಿಗ್ಗೆ ಹೊರಟು (ಕಾಡಿನಿಂದ) ತನ್ನ ಬೆನ್ನ ಮೇಲೆ ಕಟ್ಟಿಗೆ ಹೊತ್ತು ತಂದು (ಅದನ್ನು ಮಾರಿ) ದಾನ ಮಾಡಿದರೆ ಮತ್ತು ಜನರಿಂದ ನಿರಪೇಕ್ಷನಾದರೆ ಅದು ಅವನ ಪಾಲಿಗೆ ಇನ್ನೊಬ್ಬ ವ್ಯಕ್ತಿಯಿಂದ ಬೇಡುವುದಕ್ಕಿಂತ ಉತ್ತಮವಾಗಿದೆ. ಅವನು ಕೊಟ್ಟರೂ ಅಥವಾ ಕೊಡದಿದ್ದರೂ.

(ವರದಿ: ಹ. ಅಬೂ ಹುರೈರಾ(ರ)- ಬುಖಾರಿ, ಮುಸ್ಲಿಮ್)

ಆದರೆ ಒಂದು ವೇಳೆ ಯಾರಿಗಾದರೂ ಯಾಚಿಸದೆಯೇ ಏನಾದರೂ ದೊರೆತರೆ ಅದನ್ನು ಸ್ವೀಕರಿಸಿಕೊಳ್ಳಬಹುದು.

"ಪ್ರವಾದಿ(ಸ) ನನಗೆ ಸ್ವಲ್ಪ ಹಣ ನೀಡುತ್ತಿದ್ದರು. ನನಗಿಂತಲೂ ಹೆಚ್ಚು ಅಗತ್ಯ ಉಳ್ಳವನಿಗೆ ನೀಡಿರಿ ಎಂದು ನಾನು ಹೇಳುತ್ತಿದ್ದೆ. ಆಗ ಪ್ರವಾದಿ(ಸ) ಹೀಗೆ ಹೇಳುತ್ತಿದ್ದರು: "ಇದನ್ನು ತೆಗೆದುಕೊಳ್ಳಿ. ನಿಮಗೆ ಬಯಸದೆ ಮತ್ತು ಯಾಚಿಸದೆ ಏನಾದರೂ ಹಣ ದೊರೆತರೆ ಅದನ್ನು ತೆಗೆದು ಕೊಳ್ಳಿ. ನಿಮಗೆ ತಾನಾಗಿ ಸಿಗದಿರುವ ಹಣದ ಹಿಂದೆ ಬೀಳದಿರಿ."

(ವರದಿ: ಹ. ಇಬ್ನು ಉಮರ್(ರ)- ಬುಖಾರಿ, ಮುಸ್ಲಿಮ್)

ಇದು ಬೇಡುವವನಿಗೆ ನೀಡಿರುವ ಆದೇಶವಾಗಿದೆ. ಇನ್ನೊಂದೆಡೆ ಕೊಡುವವನು ಸದಾ ಬೇಡುವವನ ಬಗ್ಗೆ ಸದಭಿಪ್ರಾಯವನ್ನೇ ಹೊಂದಿರಬೇಕೆಂದು ಆತನಿಗೆ ಆದೇಶಿಸಲಾಗಿದೆ. "ಬೇಡುವವನ ಹಕ್ಕೂ ಇದೆ. ಅವನು ಕುದುರೆಯನ್ನೇರಿ ಬಂದರೂ ಸರಿಯೆ."

(ವರದಿ: ಹ. ಅನಸ್(ರ)- ಅಹ್ಮದ್, ಅಬೂ ದಾವೂದ್)

## 3. ಝಕಾತ್ ಸಂಗ್ರಹ ಮತ್ತು ವಿತರಣೆಯ ಕಾರ್ಯದಲ್ಲಿ ನಿರತರಾಗಿರುವವರು

ಝಕಾತನ್ನು ಸಂಗ್ರಹಿಸಲು, ಸಂಗ್ರಹವಾದ ಹಣವನ್ನು ಸುರಕ್ಷಿತವಾಗಿಡಲು, ಅದರ ಲೆಕ್ಕ ಪತ್ರ ಬರೆಯಲು ಮತ್ತು ಅದನ್ನು ವಿತರಿಸಲು ನೇಮಿಸಲ್ಪಟ್ಟ ಕಾರ್ಯಕರ್ತರಿಗೆ ಝಕಾತ್‌ನಿಂದಲೇ ಸಂಬಳ ಕೊಡಬಹುದು. ಅವರು ಬಡವರು ಆಗಿರದಿದ್ದರೂ ಸರಿಯೆ.

ಹ. ಖುಸ್ರ್ ಬಿನ್ ಸಈದ್(ರ) ಅವರ ವರದಿಯ ಮೇರೆಗೆ ಹ.ಅಬ್ದುಲ್ಲಾ ಬಿನ್ ಸಅದ್ ಮಾಲಿಕೀ(ರ) ಹೀಗೆ ಹೇಳಿರುವರು: "ನನ್ನನ್ನು, ಹ.ಉಮರ್(ರ) ಝಕಾತ್ ಸಂಗ್ರಹಿಸುವ ಕೆಲಸಕ್ಕೆ ನೇಮಿಸಿದರು. ನಾನು ಕೆಲಸ ಮುಗಿಸಿದಾಗ ಸಂಗ್ರಹವಾದ ಸೊತ್ತನ್ನು ಅವರಿಗೆ ಒಪ್ಪಿಸಿದೆ. ನನಗೆ ಸಂಬಳ ನೀಡುವಂತೆ ಅವರು ಆದೇಶಿಸಿದರು. ಆಗ ನಾನು, "ನಾನು ಅಲ್ಲಾಹನಿಗಾಗಿ ಕೆಲಸ ಮಾಡಿದೆ" ಎಂದೆ. ಹ. ಉಮರ್(ರ) ಹೇಳಿದರು: "ನಿಮಗೆ ಕೊಟ್ಟದ್ದನ್ನು ತೆಗೆದುಕೊಳ್ಳಿ. ನಾನು ಪ್ರವಾದಿ(ಸ) ಅವರ ಕಾಲದಲ್ಲಿ (ಝಕಾತ್ ಸಂಗ್ರಹಿಸುವ) ಕೆಲಸ ಮಾಡಿದ್ದೆ. ಅವರು(ಸ) ನನಗೆ ಸಂಬಳ ಕೊಡ ತೊಡಗಿದಾಗ ನೀವು ನನ್ನಲ್ಲಿ ಹೇಳಿದ ಮಾತನ್ನೇ ನಾನು ಅವರಲ್ಲಿ ಹೇಳಿದ್ದೆ. ಆಗ ಪ್ರವಾದಿ(ಸ) ನನಗೆ ಹೀಗೆ ಹೇಳಿದರು: "ನೀವು ಕೇಳದೆಯೇ ನಿಮಗೆ ಸಿಕ್ಕಿದ್ದನ್ನು ತೆಗೆದು ಕೊಂಡು ತಿನ್ನಿರಿ, ಕುಡಿಯಿರಿ ಮತ್ತು (ಅದರಿಂದ) ದಾನ-ಧರ್ಮ ಮಾಡಿರಿ." (ಬುಖಾರಿ, ಮುಸ್ಲಿಮ್)

ಪ್ರವಾದಿ(ಸ) ಹೀಗೆ ಹೇಳಿರುವರು: "ಸ್ಥಿತಿವಂತನು ಝಕಾತ್ ಪಡೆಯುವುದು ಧರ್ಮ ಸಮ್ಮತವಲ್ಲ. ಆದರೆ ಐದು ವಿಧದ ಜನರು ಸ್ಥಿತಿವಂತರಾಗಿದ್ದೂ ಅದನ್ನು ಪಡೆಯಬಹುದು."

1. ಝಕಾತ್‌ನ ಕೆಲಸದಲ್ಲಿ ನೇಮಕಗೊಂಡವನು.
2. ತನ್ನ ಹಣದಿಂದ ಝಕಾತ್‌ನ ಯಾವುದಾದರೂ ಸೊತ್ತನ್ನು ಖರೀದಿಸಿದವನು.
3. ಸಾಲಗಾರನಾಗಿರುವವನು.
4. ಅಲ್ಲಾಹನ ಮಾರ್ಗದಲ್ಲಿ ಹೋರಾಡುವವನು.
5. ಬಡವನೊಬ್ಬ ಝಕಾತ್ ಪಡೆದು ಅದನ್ನು ಪಾರಿತೋಷಿಕವಾಗಿ ನೀಡಿದರೆ.

(ಅಬೂ ಸಈದ್(ರ)- ಅಹ್ಮದ್, ಅಬೂ ದಾವೂದ್, ಇಬ್ನು ಮಾಜಃ, ಹಾಕಿಮ್)

ಆದರೆ ಪ್ರವಾದಿ(ಸ) ತಮಗೆ ಮತ್ತು ತಮ್ಮ ಗೋತ್ರಕ್ಕೆ(ಬನೀ ಹಾಶಿಮ್) ಈ ಬಾಬ್ತಿನಲ್ಲಿ ಕೂಡಾ ಝಕಾತ್ ಪಡೆಯುವುದನ್ನು ನಿಷಿದ್ಧಗೊಳಿಸಿರುವರು.

ಹ. ಅಬ್ಬಾಸ್(ರ) ಅವರ ಮಗ ಫಝ್ಲ್ ಮತ್ತು ಅವರ ಅಣ್ಣನ ಮೊಮ್ಮಗ ಮುತ್ತಲಿಬ್(ರ) ಪ್ರವಾದಿವರ್ಯರ ಸನ್ನಿಧಿಯಲ್ಲಿ ಹಾಜರಾದರು. ಅವರ ಪೈಕಿ ಒಬ್ಬರು ಹೀಗೆ ಹೇಳಿದರು: "ಅಲ್ಲಾಹನ ಸಂದೇಶವಾಹಕರೇ! ತಾವು ನಮ್ಮನ್ನು ಝಕಾತ್ ಸಂಗ್ರಹದ ಕೆಲಸಕ್ಕೆ ನೇಮಿಸಿ ಜನರು ಪಡೆಯುವುದನ್ನು (ಸಂಭಾವನೆ) ನಮಗೂ ಪಡೆಯಲು ಅವಕಾಶ ಮಾಡಿಕೊಡು ವಂತೆ ಮತ್ತು ಜನರು ತಮಗೆ ನೀಡುವುದನ್ನು (ದಾನ-ಧರ್ಮ) ನಾವೂ ನೀಡುವಂತೆ ಅನುವು ಮಾಡಿ ಕೊಡಬೇಕೆಂದು ಕೇಳಿಕೊಳ್ಳಲಿಕ್ಕಾಗಿ ನಾವು ತಮ್ಮ ಬಳಿಗೆ ಬಂದಿರುವೆವು." ಆಗ ಪ್ರವಾದಿ(ಸ) ಹೇಳಿದರು, "ಸದಕಾ ಮುಹಮ್ಮದ್‌ಗಾಗಲೀ(ಸ) ಅವನ ಗೋತ್ರಕ್ಕಾಗಲೀ ಹಲಾಲ್ (ಧರ್ಮಸಮ್ಮತ) ಅಲ್ಲ. ಅದು ಜನರ ಕೈಯ ಧೂಳಾಗಿದೆ." (ಅಹ್ಮದ್, ಮುಸ್ಲಿಮ್)

## 4. ಮನವೊಲಿಸಬೇಕಾದ ಅಗತ್ಯವಿರುವವರು

ಮೂಲದಲ್ಲಿ 'ಮುಅಲ್ಲಫತುಲ್ ಕುಲೂಬ್' ಎಂಬ ಪದ ಬಳಕೆಯಾಗಿದೆ. ಅದರ ಅರ್ಥ ಮನವೊಲಿಸುವುದಾಗಿದೆ. ಈ ಬಾಬ್ತಿನಲ್ಲಿ ಮುಸ್ಲಿಮರಿಗೂ ಮುಸ್ಲಿಮೇತರರಿಗೂ ಝಕಾತ್

ನೀಡಬಹುದಾಗಿದೆ. ಈ ಕುರಿತು ಅನೇಕ ಹದೀಸ್‌ಗಳಿವೆ. ಆ ಪೈಕಿ ಎರಡನ್ನು ಮಾತ್ರ ನಾವು ಇಲ್ಲಿ ಉಲ್ಲೇಖಿಸುತ್ತೇವೆ.

ಪ್ರವಾದಿ(ಸ) ಅವರ ಬಳಿ ಸ್ವಲ್ಪ ಸೊತ್ತು ಬಂತು ಅಥವಾ ಗುಲಾಮರು ಬಂದರು. ಅವರು ಕೆಲವರಿಗೆ ಕೊಡುಗೆಗಳನ್ನು ನೀಡಿದರು. ಕೆಲವರಿಗೆ ನೀಡಲಿಲ್ಲ. ಯಾರಿಗೆ ಪ್ರವಾದಿ(ಸ) ನೀಡಲಿಲ್ಲವೋ ಅವರು ಕುಪಿತಗೊಂಡಿರುವರೆಂದು ಅವರಿಗೆ ಸುದ್ದಿ ಸಿಕ್ಕಿತು. ಆಗ ಪ್ರವಾದಿ(ಸ) ಪ್ರವಚನ ನೀಡಿದರು. ಅಲ್ಲಾಹನ ಸ್ತುತಿ ಸ್ತೋತ್ರಗಳ ಬಳಿಕ ಹೀಗೆ ಹೇಳಿದರು: "ಅಲ್ಲಾಹನಾಣೆ! ನಾನು ಒಬ್ಬನಿಗೆ ಕೊಡುತ್ತೇನೆ, ಇನ್ನೊಬ್ಬನಿಗೆ ಕೊಡುವುದಿಲ್ಲ. ಯಾರಿಗೆ ನಾನು ನೀಡುವುದಿಲ್ಲವೋ ಅವನು ನನಗೆ ನಾನು ನೀಡುವವನಿಗಿಂತ ಹೆಚ್ಚು ಪ್ರೀತಿ ಪಾತ್ರನಾಗಿರುವನು. ವಾಸ್ತವದಲ್ಲಿ ಯಾರ ಮನದಲ್ಲಿ ಅಶಾಂತಿ ಮತ್ತು ಅಸಹನೆ ಇರುತ್ತದೋ ಅಂತಹವರಿಗೆ ನಾನು ನೀಡುತ್ತೇನೆ. ಯಾರಿಗೆ ನಾನು ನೀಡುವುದಿಲ್ಲವೋ ನಾನು ಅವರ ಪಾಲಿಗೆ ಅವರ ಮನಸ್ಸಿನ ನಿರಪೇಕ್ಷತೆ ಮತ್ತು ಒಳಿತೇ ಸಾಕೆಂದು ಭಾವಿಸುತ್ತೇನೆ. ಅಮ್ರ್ ಬಿನ್ ತಗ್‌ಲಬ್(ರ) ಅಂತಹವರಲ್ಲಿ ಸೇರಿರುವರು." ಅನಂತರ ಈ ಹದೀಸ್‌ನ ವರದಿಗಾರರಾದ ಹ.ಅಮ್ರ್ ಬಿನ್ ತಗ್‌ಲಬ್(ರ) ಹೇಳುತ್ತಾರೆ: "ಅಲ್ಲಾಹನಾಣೆ! ಪ್ರವಾದಿವರ್ಯರ(ಸ) ಈ ವಚನದ ಬದಲಾಗಿ ನನಗೆ ಕೆಂಪು ಒಂಟೆ ನೀಡಲ್ಪಟ್ಟರೂ ನನಗೆ ಅದು ಇಷ್ಟವಿಲ್ಲ."

(ಅಹ್ಮದ್, ಬುಖಾರಿ)

ಇಸ್ಲಾಮಿಗಾಗಿ ಪ್ರವಾದಿವರ್ಯರಲ್ಲಿ(ಸ) ಏನನ್ನು ಕೇಳಿದರೂ ಅವರು ಕೊಡುತ್ತಿದ್ದರು. ಒಮ್ಮೆ ಒಬ್ಬ ವ್ಯಕ್ತಿ ಪ್ರವಾದಿ(ಸ) ಅವರ ಬಳಿಗೆ ಬಂದಾಗ ಅವರು ಎರಡು ಗುಡ್ಡಗಳ ನಡುವೆ ಇದ್ದ ಝಕಾತ್‌ನ ಆಡುಗಳ ಪೈಕಿ ಅನೇಕ ಆಡುಗಳನ್ನು ಅವನಿಗೆ ನೀಡಲು ಆದೇಶಿಸಿದರು. ಅನಂತರ ಆ ವ್ಯಕ್ತಿ ತನ್ನ ಗೋತ್ರದ ಕಡೆಗೆ ಮರಳಿ ಜನರಿಗೆ ಹೀಗೆ ಹೇಳಿದನು: ಜನರೇ! ಮುಸ್ಲಿಮರಾಗಿರಿ. ಏಕೆಂದರೆ ಮುಹಮ್ಮದ್(ಸ) ಬಡತನದ ಭಯವೇ ಇಲ್ಲದವರಂತೆ ಉದಾರವಾಗಿ ದಾನ ಮಾಡುತ್ತಾರೆ. (ವರದಿ: ಹ. ಅನಸ್(ರ)-ಅಹ್ಮದ್)

## 5. ಕೊರಳನ್ನು ಬಿಡಿಸುವುದಕ್ಕೆ ಅಥವಾ ಜೀತ ಮುಕ್ತಿಗೆ

ಜೀತದಾಳುಗಳನ್ನು ಬಿಡಿಸುವ ಎರಡು ವಿಧಾನಗಳಿವೆ.

1. ಜೀತದಾಳು ಇಂತಿಷ್ಟು ಹಣ ಕೊಟ್ಟರೆ ಮುಕ್ತನಾಗುವನು ಎಂಬ ಕರಾರು ಆಗಿದ್ದರೆ ಅವನಿಗೆ ಸ್ವತಂತ್ರನಾಗಲು ನೆರವಾಗುವುದು.

2. ಗುಲಾಮ ಅಥವಾ ಜೀತದಾಳುಗಳನ್ನು ಖರೀದಿಸಿ ಮುಕ್ತಗೊಳಿಸುವುದು. ಈ ಎರಡೂ ವಿಧಾನದಲ್ಲೂ ಝಕಾತನ್ನು ವ್ಯಯಿಸಬಹುದಾಗಿದೆ. ಪ್ರವಾದಿ(ಸ) ಈ ರೀತಿ ಹೇಳಿರುವರು:

"ಮೂವರಿಗೆ ನೆರವಾಗುವುದು ಅಲ್ಲಾಹನ ಮೇಲೆ ಇರುವ ಹೊಣೆಯಾಗಿದೆ. (ಅರ್ಥಾತ್: ಅಲ್ಲಾಹನು ಅವರಿಗೆ ಖಂಡಿತ ನೆರವಾಗುವನು.)

1. ಅಲ್ಲಾಹನ ಮಾರ್ಗದಲ್ಲಿ ಹೋರಾಡುವವನು.

2. ಬಿಡುಗಡೆಯ ಕರಾರು ಪತ್ರ ಬರೆದು ಕೊಟ್ಟ ಜೀತದಾಳು.

3. ಪಾವಿತ್ರ್ಯತೆಯನ್ನು ಕಾಪಾಡಿಕೊಳ್ಳಲಿಕ್ಕಾಗಿ ನಿಕಾಹ್ ಮಾಡುವವನು."

(ವರದಿ: ಹ.ಅಬೂ ಹುರೈರಾ(ರ)- ತಿರ್ಮಿದಿ, ನಸಾಈ, ಅಹ್ಮದ್, ಇಬ್ನು ಮಾಜಃ)

## 6. ಸಾಲಗಾರರಿಗೆ ನೆರವು

ಸಾಲಗಾರರೆಂದರೆ ತಮ್ಮ ಸೊತ್ತು ವಿತ್ತಗಳನ್ನು ಸಾಲ ಪಾವತಿಗಾಗಿ ಕೊಟ್ಟು ಬಿಟ್ಟರೆ ದರಿದ್ರರಾಗಿ ಬಿಡುವ ಮತ್ತು ಯಾಚನೆಯು ಧರ್ಮಬದ್ಧವಾಗಿ ಬಿಡುವಂತಹ ವ್ಯಕ್ತಿಗಳು. ಪ್ರವಾದಿ(ಸ) ಈ ರೀತಿ ಹೇಳಿರುವರು:

ಕೇವಲ ಮೂರು ಮಂದಿಗೆ ಬೇಡುವುದು ಧರ್ಮಸಮ್ಮತವಾಗುತ್ತದೆ-

1. ಬಡತನದಿಂದ ನೆಲ ಕಚ್ಚಿದ ವ್ಯಕ್ತಿ.

2. ಮಿತಿ ಮೀರಿ ಸಾಲಗಾರನಾಗಿರುವ ವ್ಯಕ್ತಿ.

3. ಬಂಧು ಅಥವಾ ಮಿತ್ರರ ಪೈಕಿ ಯಾರಾದರೂ ಕೊಲೆ ಮಾಡಿದ್ದು ಅವನ ಪರವಾಗಿ 'ದಿಯತ್'(ಮೃತರ ಬಂಧುಗಳಿಗೆ ನೀಡುವ ಪರಿಹಾರಧನ) ನೀಡುವ ಹೊಣೆ ವಹಿಸಿಕೊಂಡವನು.

(ವರದಿ: ಹ. ಅನಸ್(ರ)- ಅಹ್ಮದ್, ಅಬೂ ದಾವೂದ್)

ಒಬ್ಬನು ಪ್ರವಾದಿವರ್ಯರ(ಸ) ಕಾಲದಲ್ಲಿ ಸ್ವಲ್ಪ ಹಣ್ಣುಗಳನ್ನು ಖರೀದಿಸಿದನು. ಅದರಿಂದಾಗಿ ಸಂಕಷ್ಟಕ್ಕೆ ಸಿಲುಕಿಕೊಂಡನು. ಅವನ ಸಾಲ ಬಹಳವಾಗಿ ಏರಿತು. ಪ್ರವಾದಿ(ಸ) ಜನರಲ್ಲಿ ಹೇಳಿದರು: "ಈ ವ್ಯಕ್ತಿಗೆ ದಾನ ಮಾಡಿರಿ." ಜನರು ದಾನ ನೀಡಿದರು. ಆದರೆ ಅದು ಸಂಪೂರ್ಣ ಸಾಲ ತೀರಿಸುವಷ್ಟು ಆಗಲಿಲ್ಲ. ಆಗ ಪ್ರವಾದಿ(ಸ) ಸಾಲ ನೀಡಿದವರಿಗೆ ಹೇಳಿದರು: "ನಿಮಗೆ ಏನು ಸಿಗುತ್ತದೋ ಅದನ್ನು ಪಡಕೊಳ್ಳಿ. ಇದರ ಹೊರತು ನಿಮಗೆ ಏನೂ ಸಿಗಲಾರದು."

(ವರದಿ: ಅಬೂ ಸಈದ್(ರ)- ಮುಸ್ಲಿಮ್)

## 7. ಅಲ್ಲಾಹನ ಮಾರ್ಗದ ಹೋರಾಟಕ್ಕೆ

'ಅಲ್ಲಾಹನ ಮಾರ್ಗ' ಎಂಬ ಪದವು ಕುರ್‌ಆನಿನಲ್ಲಿ ಬಹಳವಾಗಿ ಬಳಕೆಯಾಗಿದೆ. ಆದರೆ ಹೆಚ್ಚಿನ ವಿದ್ವಾಂಸರ ಪ್ರಕಾರ ಅದರ ಅರ್ಥ ಅಲ್ಲಾಹನ ಮಾರ್ಗದ ಹೋರಾಟ ಮತ್ತು ಯುದ್ಧ ವಾಗಿದೆ. ಅರ್ಥಾತ್: ಸತ್ಯನಿಷೇಧದ ವ್ಯವಸ್ಥೆಯನ್ನು ಅಳಿಸಿ ಇಸ್ಲಾಮೀ ವ್ಯವಸ್ಥೆಯನ್ನು ಸ್ಥಾಪಿಸುವ ಉದ್ದೇಶದಿಂದ ನಡೆಸುವ ಹೋರಾಟ. ಈ ಹೋರಾಟದ ಯಾವುದೇ ಖರ್ಚಿಗಾಗಿ ಝುಕಾತ್‌ನ ಹಣವನ್ನು ಬಳಸಬಹುದಾಗಿದೆ.

## 8. ಪ್ರಯಾಣಿಕ

ಪ್ರಯಾಣಿಕನು ಧನಿಕನಾಗಿದ್ದರೂ ಅವನಿಗೆ ಝುಕಾತ್ ಪಡೆಯುವುದು ಧರ್ಮಸಮ್ಮತ ವಾಗಿದೆ. ಪ್ರವಾದಿ(ಸ) ಹೀಗೆ ಹೇಳಿರುವರು:

"ಝುಕಾತ್ ಪಡೆಯುವುದು ಸ್ಥಿತಿವಂತನಿಗೆ ಧರ್ಮಸಮ್ಮತವಲ್ಲ. ಆದರೆ-

1. ಅಲ್ಲಾಹನ ಮಾರ್ಗದ ಹೋರಾಟಕ್ಕಾಗಿ

2. ಪ್ರಯಾಣಿಕನಾಗಿರುವಾಗ

3. ನಿಮ್ಮ ನೆರೆಯವನು ಬಡವನಾಗಿದ್ದು ಅವನಿಗೆ ಸಿಕ್ಕಿದ ಝುಕಾತ್‌ನಿಂದ ನಿಮಗೆ ಉಡುಗೊರೆ ನೀಡಿದರೆ ಅಥವಾ ನಿಮಗೆ ಔತಣ ಏರ್ಪಡಿಸಿದರೆ ಅದನ್ನು ಪಡೆಯಬಹುದಾಗಿದೆ."

(ವರದಿ: ಹ.ಅಬೂ ಸಈದ್(ರ)- ಅಬೂ ದಾವೂದ್)

❖❖

# ಯಾವ ಸೊತ್ತಿನ ಮೇಲೆ ಝಕಾತ್ ಕಡ್ಡಾಯ?

ಹದೀಸ್‌ನಲ್ಲಿ ಝಕಾತ್ ಕಡ್ಡಾಯವೆಂದು ಸಾರಿರುವ ಸೊತ್ತುಗಳ ಐದು ವಿಧಗಳಿವೆ:

1. ಚಿನ್ನ, ಬೆಳ್ಳಿ(ನಗದು)
2. ವ್ಯಾಪಾರದ ಸರಕು
3. ಕೃಷಿ ಉತ್ಪನ್ನಗಳು
4. ಜಾನುವಾರುಗಳು
5. ಖನಿಜ ಸಂಪತ್ತು

## 1. ಚಿನ್ನ-ಬೆಳ್ಳಿ(ನಗದು)

### 1) ಬೆಳ್ಳಿಯ ಪ್ರಮಾಣ ಮತ್ತು ಝಕಾತ್‌ನ ದರ

ಬೆಳ್ಳಿಯ ಪ್ರಮಾಣವು $52^1/_2$* ತೊಲೆ ಮತ್ತು ಅದರ ಝಕಾತ್‌ನ ದರ $2^1/_2$ಶೇ. ಎಂಬುದು ಒಂದು ಸರ್ವಸಮ್ಮತ ವಿಧಿ. ಆದ್ದರಿಂದ ಯಾರ ಬಳಿಯಲ್ಲಾದರೂ $52^1/_2$ ತೊಲೆ ಬೆಳ್ಳಿಯಿದ್ದು ಅದಕ್ಕೆ ಒಂದು ವರ್ಷ ಕಳೆದಿದ್ದರೆ ಅದರ ನಲ್ವತ್ತನೆಯ ಒಂದಂಶವನ್ನು ($2^1/_2$ಶೇ.) ಝಕಾತ್‌ನ ರೂಪದಲ್ಲಿ ಪಾವತಿಸುವುದು ಕಡ್ಡಾಯವಾಗಿದೆ.

ಪ್ರವಾದಿ(ಸ) ಈ ರೀತಿ ಹೇಳಿರುವರು:

"$52^1/_2$ ತೊಲೆಗಿಂತ ಕಡಿಮೆ ಬೆಳ್ಳಿಗೆ ಯಾವುದೇ ಝಕಾತ್ ಇಲ್ಲ."

(ವರದಿ: ಹ. ಜಾಬಿರ್(ರ) -ಮುಸ್ಲಿಮ್)

"ನಾನು ನಿಮಗೆ ಕುದುರೆಗಳ ಮತ್ತು ಗುಲಾಮರ ಝಕಾತನ್ನು ಮನ್ನಾ ಮಾಡಿರುವೆನು. ಆದರೆ ಬೆಳ್ಳಿಯ ಝಕಾತನ್ನು ಪಾವತಿಸಿರಿ. ಪ್ರತಿ 40 ದಿರ್ಹಮ್‌ಗಳಲ್ಲಿ ಒಂದು ದಿರ್ಹಮ್ ಝಕಾತ್ ಆಗಿದೆ. 190 ದಿರ್ಹಮ್‌ಗಳ ತನಕ ಯಾವುದೇ ಝಕಾತ್ ಇಲ್ಲ. ಆದರೆ ಅದು 200 ದಿರ್ಹಮ್ ಆದಾಗ ಅದರ ಮೇಲೆ 5 ದಿರ್ಹಮ್ ಝಕಾತ್ ಇದೆ."

(ವರದಿ: ಹ.ಅಲೀ(ರ)- ಅಹ್ಮದ್, ಅಬೂ ದಾವೂದ್, ತಿರ್ಮಿದಿ, ನಸಾಈ, ಇಬ್ನು ಮಾಜಃ)

### 2) ಚಿನ್ನದ ಪ್ರಮಾಣ ಮತ್ತು ಝಕಾತ್‌ನ ದರ

ಹೆಚ್ಚಿನ ಕರ್ಮಶಾಸ್ತ್ರಜ್ಞರ ಪ್ರಕಾರ ಚಿನ್ನದ ಪ್ರಮಾಣವು $7^1/_2$ತೊಲೆಯಾಗಿದೆ. ಅದರ

---

* ಗ್ರಾಮ್

ಮೇಲೆ ಝಕಾತ್‌ನ ಪ್ರಮಾಣ 2½ಶೇ. ಆಗಿದೆ. ಆದ್ದರಿಂದ ಒಬ್ಬನ ಬಳಿ 7½* ತೊಲೆ ಚಿನ್ನ ಇದ್ದು ಅದಕ್ಕೆ ಒಂದು ವರ್ಷ ಕಳೆದಿದ್ದರೆ ಅದರ ಮೇಲೆ ನಲ್ವತ್ತನೆಯ ಒಂದಂಶ ಝಕಾತ್ ಪಾವತಿಸಬೇಕು.

ಪ್ರವಾದಿ(ಸ) ಈ ರೀತಿ ಹೇಳಿರುವರು:

"ನಿಮ್ಮ ಬಳಿ ಚಿನ್ನವು 7½ತೊಲೆಗಿಂತ ಕಡಿಮೆಯಿರುವ ತನಕ ಅದರ ಮೇಲೆ ಯಾವುದೇ ಝಕಾತ್ ಇಲ್ಲ. ನಿಮ್ಮ ಬಳಿ 7½ ತೊಲೆ ಚಿನ್ನ ಇದ್ದು ಅದಕ್ಕೆ ಒಂದು ವರ್ಷ ಕಳೆದಿದ್ದರೆ ಅದರ ನಲ್ವತ್ತನೆಯ ಒಂದಂಶವನ್ನು ಝಕಾತ್ ನೀಡಬೇಕು."

(ವರದಿ: ಹ. ಅಲೀ(ರ)- ಅಬೂ ದಾವೂದ್)

ಬೆಳ್ಳಿ ಮತ್ತು ಚಿನ್ನದ ಝಕಾತನ್ನು ಅದರ ತೂಕದ ಪ್ರಕಾರ ನಿರ್ಣಯಿಸಲಾಗುವುದೇ ಹೊರತು ಅದರ ಬೆಲೆ ಪ್ರಕಾರವಲ್ಲ. ಬೆಳ್ಳಿ ಅಥವಾ ಚಿನ್ನವು ನಾಣ್ಯಗಳ ರೂಪದಲ್ಲಿದ್ದರೂ ಇಲ್ಲದಿದ್ದರೂ ಯಾವುದೇ ವ್ಯತ್ಯಾಸವಾಗುವುದಿಲ್ಲ.

### 3) ಚಿನ್ನ ಮತ್ತು ಬೆಳ್ಳಿ ಬೇರೆ ಬೇರೆ ಇದ್ದು ಅವುಗಳಲ್ಲಿ ಪ್ರತಿಯೊಂದೂ ಪ್ರಮಾಣಕ್ಕಿಂತ ಕಡಿಮೆಯಿದ್ದರೆ

ಹದೀಸ್‌ನಲ್ಲಿ ಬೆಳ್ಳಿ ಮತ್ತು ಚಿನ್ನದ ಪ್ರಮಾಣವನ್ನು ಪ್ರತ್ಯಪ್ರತ್ಯೇಕ ವಿವರಿಸಲಾಗಿದೆ. ಆದ್ದರಿಂದ ಒಬ್ಬನ ಬಳಿ ಚಿನ್ನ ಬೆಳ್ಳಿಗಳೆರಡೂ ಇದ್ದು-ಎರಡೂ, ಪ್ರಮಾಣಕ್ಕಿಂತ ಕಡಿಮೆಯಿದ್ದರೆ ಅವೆರಡನ್ನೂ ಸೇರಿಸಿ ಅವನು ಝಕಾತ್ ನೀಡಬೇಕೇ ಬೇಡವೇ ಎಂಬ ಬಗ್ಗೆ ಕರ್ಮಶಾಸ್ತ್ರ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿದೆ.

ಇಮಾಮ್ ಶಾಫಿಈ(ರ) ಅವರ ಪ್ರಕಾರ ಇವೆರಡನ್ನೂ ಸೇರಿಸಿ ಝಕಾತ್ ತೆಗೆಯುವ ಅಗತ್ಯವಿಲ್ಲ. ಆದರೆ ಇಮಾಮ್ ಅಬೂ ಹನೀಫಾ(ರ) ಅವರ ಪ್ರಕಾರ ಇವೆರಡನ್ನೂ ಸೇರಿಸಿದಾಗ ಯಾವುದಾದರೊಂದರ ಪ್ರಮಾಣ ಪೂರ್ತಿಯಾಗುವುದಾದರೆ ಆತನು ಅದರ ಝಕಾತ್ ಪಾವತಿಸಬೇಕು.

### 4) ನಾಣ್ಯ ಮತ್ತು ಕಾಗದದ ನೋಟುಗಳ ಝಕಾತ್

ಪ್ರವಾದಿವರ್ಯರ(ಸ) ಕಾಲದಲ್ಲಿ ನಗದಿನ ರೂಪದಲ್ಲಿ ಚಿನ್ನ ಅಥವಾ ಬೆಳ್ಳಿಯ ನಾಣ್ಯಗಳು ಚಲಾವಣೆಯಲ್ಲಿದ್ದುವು. ಪ್ರಸಕ್ತ ಲೋಕದ ನಾಣ್ಯಗಳು ಮತ್ತು ಕಾಗದದ ನೋಟುಗಳು ಅವುಗಳ ಸ್ಥಾನದಲ್ಲಿವೆ. ಅವುಗಳನ್ನು ಯಾವ ಸಮಯದಲ್ಲೂ ಚಿನ್ನ ಅಥವಾ ಬೆಳ್ಳಿಯಿಂದ ಬದಲಾಯಿಸಬಹುದು. ಆದ್ದರಿಂದ ಒಬ್ಬನ ಬಳಿ ಚಿನ್ನ ಅಥವಾ ಬೆಳ್ಳಿಯ ಝಕಾತ್‌ನ ಪ್ರಮಾಣದಷ್ಟು ನಾಣ್ಯ ಅಥವಾ ನೋಟುಗಳಿದ್ದು ಅದಕ್ಕೆ ಒಂದು ವರ್ಷ ಕಳೆದರೆ ಅದರ ಮೇಲೆ ಝಕಾತ್ ಕಡ್ಡಾಯವಾಗುತ್ತದೆ.

* ಗ್ರಾಮ್

### 5) ಮಹಿಳೆಯ ಒಡವೆಯ ಝಕಾತ್

ಮುತ್ತು, ರತ್ನ, ವಜ್ರ ಇತ್ಯಾದಿಗಳು; ಬಟ್ಟೆಬರೆಗಳು ಮತ್ತು ಗೃಹೋಪಯೋಗಿ ಸಾಮಗ್ರಿಗಳ ಮೇಲೆ ಯಾವುದೇ ಝಕಾತ್ ಇಲ್ಲ. ಆದರೆ ಇವು ವ್ಯಾಪಾರ ಸರಕಿನ ರೂಪದಲ್ಲಿದ್ದರೆ ಝಕಾತ್ ಕಡ್ಡಾಯವಾಗುತ್ತದೆ.

ಮಹಿಳೆಯ ಒಡವೆಗಳು ಚಿನ್ನ ಅಥವಾ ಬೆಳ್ಳಿಯದ್ದಾಗಿದ್ದು, ಅದು ಝಕಾತ್‌ನ ಪ್ರಮಾಣದಷ್ಟಿದ್ದರೆ ಹಾಗೂ ಅದಕ್ಕೆ ಒಂದು ವರ್ಷ ಕಳೆದಿದ್ದರೆ ಝಕಾತ್ ಕಡ್ಡಾಯವಾಗುತ್ತದೆ. ಒಮ್ಮೆ ಓರ್ವ ಮಹಿಳೆ ಪ್ರವಾದಿ(ಸ) ಅವರ ಬಳಿಗೆ ಬಂದರು. ಅವರ ಜತೆ ಅವರ ಓರ್ವ ಪುತ್ರಿಯೂ ಇದ್ದಳು. ಆಕೆಯ ಕೈಗಳಲ್ಲಿ ಚಿನ್ನದ ಬಳೆಗಳಿದ್ದುವು. "ನೀವು ಇದರ ಝಕಾತ್ ಕೊಡುತ್ತೀರಾ?" ಎಂದು ಪ್ರವಾದಿ(ಸ) ವಿಚಾರಿಸಿದರು. ಆಕೆ 'ಇಲ್ಲ' ಎಂದಾಗ, "ಕಿಯಾಮತ್‌ನ ದಿನ ಅಲ್ಲಾಹನು ಇವುಗಳ ಬದಲು ಬೆಂಕಿಯ ಬಳೆಗಳನ್ನು ತೊಡಿಸುವುದನ್ನು ನೀವು ಇಷ್ಟಪಡುತ್ತೀರಾ?" ಎಂದು ಪ್ರವಾದಿ(ಸ) ಪ್ರಶ್ನಿಸಿದರು.

(ವರದಿ: ಅಮ್ರ್ ಬಿನ್ ಶುಐಬ್ ತಮ್ಮ ತಂದೆಯ ಮೂಲಕ ತಮ್ಮ ತಾತನಿಂದ - ಅಬೂ ದಾವೂದ್, ತಿರ್ಮಿದಿ, ನಸಾಈ)

ನಾನು ಚಿನ್ನದ ಬಳೆಗಳನ್ನು ತೊಟ್ಟಿದ್ದೆ. ನಾನು ಪ್ರವಾದಿವರ್ಯರಲ್ಲಿ(ಸ) ಹೀಗೆ ವಿಚಾರಿಸಿದೆ: "ಪ್ರವಾದಿವರ್ಯರೇ!ಈ ಬಳೆ 'ಕನ್‌ಝ್' (ಶೇಖರಿಸಿದ ನಿಧಿ-ಅದರ ಝಕಾತ್ ಕೊಡದವರಿಗೆ ಅಲ್ಲಾಹನು ಪವಿತ್ರ ಕುರ್‌ಆನಿನಲ್ಲಿ ಎಚ್ಚರಿಸಿದ್ದಾನೆ) ಆಗುವುದೇ? ಆಗ ಪ್ರವಾದಿ(ಸ) ಹೇಳಿದರು: "ನೀವು ಅದರ ಝಕಾತ್ ನೀಡಿದ್ದರೆ ಅದು 'ಕನ್‌ಝ್' ಆಗಲಾರದು."

(ವರದಿ: ಹ. ಉಮ್ಮು ಸಲಮ(ರ)- ಅಬೂ ದಾವೂದ್, ದಾರುಕುತ್ನಿ)

ಇದುವೇ ಹೆಚ್ಚಿನ ಸಹಾಬಿಗಳ ಮತ್ತು ತಾಬಿಈಗಳ ನಿಲುವಾಗಿದೆ. ಇದನ್ನೇ ಇಮಾಮ್ ಅಬೂ ಹನೀಫಾ(ರ) ಅವಲಂಬಿಸಿದ್ದಾರೆ. ಆದರೆ ಇಮಾಮ್ ಶಾಫಿಈಯವರ(ರ) ಪ್ರಕಾರ ಮಹಿಳೆಯ ಆಭರಣಗಳ ಮೇಲೆ ಯಾವುದೇ ಝಕಾತ್ ಇಲ್ಲ. ಆದರೆ ಅದು ಕೇವಲ ಉಪಯೋಗದ ಆಭರಣಗಳಾಗಿರಬೇಕು. ಶೇಖರಣೆಯ ಉದ್ದೇಶದಿಂದ ಮಾಡಿಟ್ಟ ಒಡವೆಗಳಿಗೆ ಎಲ್ಲ ಇಮಾಮರ ಪ್ರಕಾರವೂ ಝಕಾತ್ ಕಡ್ಡಾಯವಾಗಿದೆ.

## 2. ವ್ಯಾಪಾರದ ಸರಕು

### 1) ವ್ಯಾಪಾರ ಸರಕಿನ ಮೇಲೆ ಝಕಾತ್‌ನ ವಿಧಿ

ವ್ಯಾಪಾರದ ಸರಕಿನ ಮೇಲೆ ಝಕಾತ್ ಕಡ್ಡಾಯವಾಗಿದೆ. ಅಲ್ಲಾಹನು ಈ ರೀತಿ ಹೇಳಿರುವನು:

يَا أَيُّهَا الَّذِينَ آمَنُوا أَنفِقُوا مِن طَيِّبَاتِ مَا كَسَبْتُمْ

"ಓ ಸತ್ಯವಿಶ್ವಾಸಿಗಳೇ! ನೀವು ಸಂಪಾದಿಸಿದ ಸಂಪತ್ತಿನಿಂದ ಉತ್ತಮವಾದವುಗಳನ್ನು ದೇವ ಮಾರ್ಗದಲ್ಲಿ ಖರ್ಚು ಮಾಡಿರಿ." (ಪವಿತ್ರ ಕುರ್‌ಆನ್, 2:267)

"ನಾವು ವ್ಯಾಪಾರಕ್ಕಾಗಿ ಸಿದ್ಧಗೊಳಿಸುವ ಸೊತ್ತಿನ ಝಕಾತ್ ತೆಗೆಯಬೇಕೆಂದು ಪ್ರವಾದಿವರ್ಯರು(ಸ) ನಮಗೆ ಆಜ್ಞಾಪಿಸಿದ್ದರು."

(ವರದಿ: ಹ. ಸಮ್ರಾ ಬಿನ್ ಜುಂದುಬ್(ರ)- ಅಬೂ ದಾವೂದ್, ಬೈಹಕಿ)

ಒಂಟೆ, ಕುರಿ, ದನಗಳು ಮತ್ತು ವ್ಯಾಪಾರದ ಬಟ್ಟೆಗಳ ಮೇಲೆ ಝಕಾತ್ ಇದೆ.

(ವರದಿ: ಹ. ಅಬೂದರ್(ರ)- ಅಬೂ ದಾವೂದ್, ಬೈಹಕಿ, ದಾರುಕುತ್ನಿ)

ಎಲ್ಲಾ ಇಮಾಮರ ಪ್ರಕಾರದ ವ್ಯಾಪಾರ ಸರಕಿನ ಮೇಲೆ ಶೇ.$2\frac{1}{2}$ ಝಕಾತ್ ಕಡ್ಡಾಯವಾಗಿದೆ.

**2) ಝಕಾತ್‌ನ ದರ**

ವ್ಯಾಪಾರದ ಸರಕಿನ ಝಕಾತ್‌ನ ದರವು ನಗದಿನ ದರವೇ ಆಗಿದೆ. ಅಂದರೆ ಶೇ.$2\frac{1}{2}$ ವರ್ಷಾಂತ್ಯದಲ್ಲಿ ವ್ಯಾಪಾರದ ಸರಕು $52\frac{1}{2}$ ತೊಲೆ ಬೆಳ್ಳಿ ಅಥವಾ $7\frac{1}{2}$ ತೊಲೆ ಚಿನ್ನದ ಬೆಲೆಗೆ ಸಮಾನವಾಗಿದ್ದರೆ ಅದರ ಮೇಲೆ $2\frac{1}{2}$ಶೇ. ಝಕಾತ್ ಕಡ್ಡಾಯವಾಗುತ್ತದೆ.

**3) ವ್ಯಾಪಾರದ ನಿಯ್ಯತ್**

ಯಾವುದೇ ವಸ್ತು ವ್ಯಾಪಾರದ ಸರಕು ಎನಿಸಬೇಕಾದರೆ ಅದರ ಒಡೆಯನು ಅದನ್ನು ವ್ಯಾಪಾರ ಮಾಡುವ ಸಂಕಲ್ಪ ಹೊಂದಿರಬೇಕು. ಖಾಸಗಿ ಬಳಕೆಗಾಗಿರುವ ವಸ್ತುಗಳ ಮೇಲೆ ಝಕಾತ್ ಕಡ್ಡಾಯವಾಗುವುದಿಲ್ಲ. ಉದಾ: ಮನೆ, ಕುದುರೆ, ವಾಹನಗಳು, ಬಟ್ಟೆ-ಬರೆ, ಪಾತ್ರೆಗಳು ಇತ್ಯಾದಿ.

## 3. ಕೃಷಿ ಉತ್ಪನ್ನಗಳು

**1) ವಿಧಿ**

ಕೃಷಿ ಉತ್ಪನ್ನಗಳ ಮೇಲೆ ಕುರ್‌ಆನ್, ಸುನ್ನತ್ ಮತ್ತು ಸಮುದಾಯದ ಒಮ್ಮತದ ಪ್ರಕಾರ ಝಕಾತ್ ಕಡ್ಡಾಯವಾಗಿದೆ.

يَاأَيُّهَا الَّذِينَ آمَنُوا أَنْفِقُوا مِنْ طَيِّبَاتِ مَا كَسَبْتُمْ وَمِمَّا أَخْرَجْنَا لَكُمْ مِنَ الْأَرْضِ

"ಓ ಸತ್ಯವಿಶ್ವಾಸಿಗಳೇ! ನೀವು ಸಂಪಾದಿಸಿದ ಸಂಪತ್ತಿನಿಂದ ಮತ್ತು ನಾವು ನಿಮಗಾಗಿ ಭೂಮಿಯಿಂದ ಉತ್ಪಾದಿಸಿದವುಗಳಿಂದ ಉತ್ತಮವಾದವುಗಳನ್ನು ದೇವ ಮಾರ್ಗದಲ್ಲಿ ಸಂದಾಯ ಮಾಡಿರಿ." (ಅಲ್‌ಬಕರಃ -267)

ಇನ್ನೊಂದೆಡೆ ಹೀಗೆ ಹೇಳಲಾಗಿದೆ:

وَآتُوا حَقَّهُ يَوْمَ حَصَادِهِ

"ಮತ್ತು ಕೊಯ್ಲಿನ ದಿವಸ ಅವುಗಳ ಉತ್ಪನ್ನಗಳಿಂದ ಅಲ್ಲಾಹನ ಹಕ್ಕನ್ನು ಪಾವತಿಸಿರಿ."

(ಅಲ್ ಅನ್‌ಆಮ್ : 141)

ಪ್ರವಾದಿ(ಸ) ಈ ರೀತಿ ಹೇಳಿರುವರು:

"ಮಳೆಯಿಂದ ಅಥವಾ ಪ್ರಾಕೃತಿಕ ನೀರಿನಿಂದ ಬೆಳೆಯುವ ಉತ್ಪನ್ನಗಳ ಹತ್ತನೇ ಒಂದಂಶ ಮತ್ತು ಕೃತಕ ನೀರಾವರಿಯಿಂದ ಬೆಳೆಯುವ ಉತ್ಪನ್ನಗಳ ಮೇಲೆ ಇಪ್ಪತ್ತನೇ ಒಂದಂಶ ಝಕಾತ್ ಇದೆ. (ಬುಖಾರಿ, ಅಬೂ ದಾವೂದ್, ಇಬ್ನು ಮಾಜಃ, ತಿರ್ಮಿದಿ)

**2) ಯಾವ ಕೃಷಿ ಉತ್ಪನ್ನದ ಮೇಲೆ ಝಕಾತ್ ಕಡ್ಡಾಯ?**

ಪ್ರವಾದಿವರ್ಯರ(ಸ) ಕಾಲದಲ್ಲಿ ಕೃಷಿ ಉತ್ಪನ್ನಗಳ ಪೈಕಿ ಕೇವಲ ನಾಲ್ಕು ವಸ್ತುಗಳ ಮೇಲೆ ಝಕಾತ್ ವಸೂಲು ಮಾಡಲಾಗುತ್ತಿತ್ತು. ಗೋಧಿ, ಜೋಳ, ಖರ್ಜೂರ ಮತ್ತು ಒಣ ದ್ರಾಕ್ಷಿ.

ಪ್ರವಾದಿವರ್ಯರ(ಸ) ಸುನ್ನತ್ ಕೇವಲ ನಾಲ್ಕು ವಸ್ತುಗಳ ಮೇಲೆ ಝಕಾತ್ ವಸೂಲಿ ಮಾಡುವುದಾಗಿದೆ. ಗೋಧಿ, ಜೋಳ, ಖರ್ಜೂರ ಮತ್ತು ಒಣ ದ್ರಾಕ್ಷಿ.

(ವರದಿ: ಅಮ್ರ್ ಬಿನ್ ಶುಐಬ್ ತಮ್ಮ ತಂದೆಯ ಮೂಲಕ ತಮ್ಮ ತಾತನಿಂದ- ದಾರುಕುತ್ನಿ)

ಆದ್ದರಿಂದ ಗೋಧಿ, ಜೋಳ, ಖರ್ಜೂರ ಮತ್ತು ಒಣ ದ್ರಾಕ್ಷಿಯ ಮೇಲೆ ಝಕಾತ್ ಎಲ್ಲರ ಪ್ರಕಾರ ಕಡ್ಡಾಯವಾಗಿದೆ.

ತರಕಾರಿಗಳ ಮೇಲೆ ಪ್ರವಾದಿವರ್ಯರ(ಸ) ಕಾಲದಲ್ಲಿ ಯಾವುದೇ ಝಕಾತ್ ವಸೂಲಿ ಮಾಡಲಾಗುತ್ತಿರಲಿಲ್ಲ.

ಅಬ್ದುಲ್ಲಾ ಬಿನ್ ಮುಗೀರಾ(ರ) ಅವರ ಗದ್ದೆಯಲ್ಲಿ ಬೆಳೆದ ತರಕಾರಿಗಳ ಝಕಾತ್ ವಸೂಲಿ ಮಾಡಬಯಸಿದಾಗ ಅವರು ಮೂಸಾ ಬಿನ್ ತಲ್ಹಾರಲ್ಲಿ(ರ) ಹೇಳಿದರು: "ಪ್ರವಾದಿ(ಸ) ಅವರು ಅದರ(ತರಕಾರಿಯ) ಮೇಲೆ ಝಕಾತ್ ಇಲ್ಲ ಎಂದು ಹೇಳಿರುವರು. ಆದುದರಿಂದ ನೀವು ಅದರ ಝಕಾತ್ ವಸೂಲಿ ಮಾಡುವಂತಿಲ್ಲ."

(ವರದಿ: ಅತಾ ಬಿನ್ ಸಾಯಿಬ್(ರ)- ದಾರುಕುತ್ನಿ, ಹಾಕಿಮ್, ಅಸ್ರಮ್)

ಇಮಾಮ್ ಶಾಫಿಈಯವರ(ರ) ಪ್ರಕಾರ ಯಾವ ಕೃಷಿ ಉತ್ಪನ್ನಗಳು ಒಣಗಿದ ನಂತರ ಆಹಾರಕ್ಕಾಗಿ ದಾಸ್ತಾನು ಮಾಡಲ್ಪಡುತ್ತವೋ ಅವುಗಳೆಲ್ಲದರ ಮೇಲೆ ಝಕಾತ್ ಕಡ್ಡಾಯವಾಗಿದೆ. ಆದ್ದರಿಂದ ಅವರ ಪ್ರಕಾರ ಫಲಗಳ ಪೈಕಿ ಖರ್ಜೂರ ಮತ್ತು ಒಣ ದ್ರಾಕ್ಷಿಯ ಹೊರತು ಬೇರಾವುದರ ಮೇಲೂ ಝಕಾತ್ ಕಡ್ಡಾಯವಲ್ಲ. ತರಕಾರಿಗಳ ಮೇಲೂ ಝಕಾತ್ ಕಡ್ಡಾಯವಲ್ಲ.

ಆದರೆ ಇಮಾಮ್ ಅಬೂ ಹನೀಫಾರ(ರ) ಅವರ ಪ್ರಕಾರ ಕಟ್ಟಿಗೆ, ಬಿದಿರು, ಹುಲ್ಲು ಮತ್ತು ಫಲರಹಿತ ಮರಗಳ ಹೊರತು ಇತರೆಲ್ಲ ಉತ್ಪನ್ನಗಳಿಗೂ ಝಕಾತ್ ಕಡ್ಡಾಯವಾಗಿದೆ. ಫಲಗಳು ಮತ್ತು ತರಕಾರಿಗಳ ಮೇಲೂ ಝಕಾತ್ ಕಡ್ಡಾಯವಾಗಿದೆ.

**3) ಧಾನ್ಯ ಮತ್ತು ಫಲಗಳ ಪ್ರಮಾಣ**

ಹೆಚ್ಚಿನ ಕರ್ಮಶಾಸ್ತ್ರ ವಿದ್ವಾಂಸರ ಪ್ರಕಾರ ಧಾನ್ಯ ಮತ್ತು ಫಲಗಳ ಮೇಲೆ ಝಕಾತ್ ಕಡ್ಡಾಯವಾಗುವ ಕನಿಷ್ಠ ಪ್ರಮಾಣ 4 ಮಣ (50 ಕೆ.ಜಿ.)ವಾಗಿದೆ.

ಪ್ರವಾದಿ(ಸ) ಈ ರೀತಿ ಹೇಳಿರುವರು:

"ನಾಲ್ಕು ಮಣ(50ಕೆ.ಜಿ.)ಕ್ಕಿಂತ ಕಡಿಮೆ (ಧಾನ್ಯ ಮತ್ತು ಫಲಗಳ) ಮೇಲೆ ಝಕಾತ್ ಕಡ್ಡಾಯವಿಲ್ಲ."

(ವರದಿ: ಹ.ಅಬೂ ಸಈದ್ ಖುದ್ರೀ(ರ)- ಬುಖಾರಿ, ಮುಸ್ಲಿಮ್, ಅಬೂ ದಾವೂದ್, ತಿರ್ಮಿದಿ, ನಸಾಈ, ಇಬ್ನು ಮಾಜಃ, ಅಹ್ಮದ್)

**4) ಧಾನ್ಯ ಮತ್ತು ಫಲಗಳ ಝಕಾತ್‌ನ ದರ**

ಧಾನ್ಯ ಮತ್ತು ಫಲಗಳ ಝಕಾತ್‌ನ ದರದಲ್ಲಿ ನೈಸರ್ಗಿಕ ಮತ್ತು ಕೃತಕ ನೀರಾವರಿಯ ಕಾರಣದಿಂದ ವ್ಯತ್ಯಾಸವಿದೆ. ನೈಸರ್ಗಿಕ ನೀರಾವರಿಯಿಂದ ಆಗುವ ಉತ್ಪನ್ನದ 10ಶೇ. ಮತ್ತು ಕೃತಕ ನೀರಾವರಿಯಿಂದ ಆಗುವ ಉತ್ಪಾದನೆಯ 5ಶೇ. ಝಕಾತ್ ಕಡ್ಡಾಯವಾಗಿದೆ.

ಒಂದು ವೇಳೆ ಯಾವುದಾದರೂ ಬೆಳೆ ಅರ್ಧ ಅವಧಿ ಮಳೆ ನೀರಿನಿಂದ ಮತ್ತು ಇನ್ನೊಂದರ್ಧ ಅವಧಿ ಕೃತಕ ನೀರಾವರಿಯಿಂದ ಆಗಿದ್ದರೆ ಅದರ ಮೇಲೆ $7^1/_2$ಶೇ. ಝಕಾತ್ ಕಡ್ಡಾಯವಾಗುವುದು.

ಒಂದು ವೇಳೆ ಬೆಳೆಯು ಹೆಚ್ಚು ಕಾಲ ಮಳೆಯಿಂದಲೂ ಕಡಿಮೆ ಕಾಲ ನೀರಾವರಿಯಿಂದಲೂ ಆಗಿದ್ದರೆ ಅದಕ್ಕೆ 10ಶೇ. ಝಕಾತ್ ಮತ್ತು ಹೆಚ್ಚು ಕಾಲ ನೀರಾವರಿಯಿಂದಲೂ ಕಡಿಮೆ ಕಾಲ ಮಳೆಯಿಂದಲೂ ಆಗಿದ್ದರೆ 5% ಝಕಾತ್ ಕಡ್ಡಾಯವಾಗುವುದೆಂಬುದು ಹೆಚ್ಚಿನ ಕರ್ಮಶಾಸ್ತ್ರ ವಿದ್ವಾಂಸರ ಅಭಿಪ್ರಾಯ.

**5) ಧಾನ್ಯ ಮತ್ತು ಫಲಗಳನ್ನು ಪರಸ್ಪರ ಬೆರೆಸುವುದು**

ಒಂದೇ ಧಾನ್ಯ ಅಥವಾ ಫಲದ ಉತ್ತಮ ಮತ್ತು ಸಾಮಾನ್ಯ ವಿಧಗಳನ್ನು ಪರಸ್ಪರ ಬೆರೆಸಿದ್ದರೆ ಅವುಗಳಿಂದ ಪ್ರತಿಯೊಂದು ಪ್ರಮಾಣಕ್ಕೆ ಅನುಸಾರವಾಗಿ ಝಕಾತ್ ವಸೂಲಿ ಮಾಡಲಾಗುವುದು. ಧಾನ್ಯ ಅಥವಾ ಫಲದ ಅನೇಕ ವಿಧಗಳಿದ್ದರೆ ಅವುಗಳ ಪೈಕಿ ಮಧ್ಯಮ ವಿಧದ ಝಕಾತ್ ವಸೂಲಿ ಮಾಡಲಾಗುವುದು. ಇದೊಂದು ಸರ್ವಸಮ್ಮತ ವಿಧಿ.

(ಹಿದಾಯತುಲ್ ಮುಜ್ತಹಿದ್ ಭಾಗ-1, ಪುಟ: 240)

**6) ಝಕಾತ್ ಯಾವಾಗ ಕಡ್ಡಾಯವಾಗುತ್ತದೆ?**

ಕೊಯ್ಲು ಆಗುವ ಸಮಯದಲ್ಲಿ ಝಕಾತ್ ವಸೂಲಿ ಮಾಡಲಾಗುವುದು. ಇಮಾಮ್ ಶಾಫಿಈಯವರ(ರ) ಪ್ರಕಾರ ಧಾನ್ಯ ಅಥವಾ ಫಲ ಬೆಳೆದಾಗಲೇ ಝಕಾತ್ ಕಡ್ಡಾಯವಾಗುತ್ತದೆ. ಆದರೆ ಇಮಾಮ್ ಅಬೂ ಹನೀಫಾರ(ರ) ಪ್ರಕಾರ ಫಲ ಬೆಳೆಯಲು ಆರಂಭವಾದಾಗಲೇ ಝಕಾತ್ ಕಡ್ಡಾಯವಾಗುತ್ತದೆ.

**7) ಜೇನುತುಪ್ಪದ ಝಕಾತ್**

ಇಮಾಮ್ ಅಬೂ ಹನೀಫಾರ(ರ) ಪ್ರಕಾರ ಜೇನು ತುಪ್ಪದ ಮೇಲೆ ಝಕಾತ್ ಕಡ್ಡಾಯವಾಗಿದೆ. ಅದಕ್ಕೆ ಯಾವುದೇ ಪ್ರಮಾಣ ನಿಗದಿತವಿಲ್ಲ.

❖❖

# ಜಾನುವಾರುಗಳ ಝಕಾತ್

## 1. ಯಾವ ಜಾನುವಾರುಗಳ ಮೇಲೆ ಝಕಾತ್ ಕಡ್ಡಾಯ?

ಹದೀಸ್‌ನಲ್ಲಿ ಝಕಾತ್‌ಗೆ ಅರ್ಹವಾದ ಮೂರು ವಿಧದ ಪ್ರಾಣಿಗಳ ಪ್ರಸ್ತಾಪವಿದೆ.

1) ಒಂಟೆ

2) ದನ

3) ಆಡು-ಕುರಿ

ನಾಲ್ಕೂ ಇಮಾಮರ ಪ್ರಕಾರ ಎಮ್ಮೆಯೂ ದನದ ವಿಧಿಯಲ್ಲೇ ಬರುತ್ತದೆ.

## 2. ಒಂಟೆಯ ಪ್ರಮಾಣ

ಹ. ಅನಸ್(ರ) ಅವರ ವರದಿಯಂತೆ ಹ.ಅಬೂಬಕರ್‌ರು(ರ) ಅವರನ್ನು ಬಹ್ರೈನ್‌ನ ರಾಜ್ಯಪಾಲರಾಗಿ ನೇಮಿಸಿ ಕಳುಹಿಸಿದಾಗ ಅವರಿಗೆ ಒಂದು ಪತ್ರ ಬರೆದು ಕೊಟ್ಟರು. ಅದರಲ್ಲಿ ಪ್ರವಾದಿ ಮುಹಮ್ಮದ್(ಸ) ಅವರ ಮುದ್ರೆ ಒತ್ತಲ್ಪಟ್ಟಿತ್ತು. ಆ ಪತ್ರದ ಪ್ರಕಾರ ಒಂಟೆಯ ಝಕಾತ್‌ನ ಪ್ರಮಾಣ ಈ ಕೆಳಗಿನಂತಿದೆ:

ನಾಲ್ಕು ಒಂಟೆಗಳ ವರೆಗೆ ಯಾವುದೇ ಝಕಾತ್ ಇಲ್ಲ. ಸ್ವಇಚ್ಛೆಯಿಂದ ಅವುಗಳ ಒಡೆಯ ಕೊಡುವುದು ಇದಕ್ಕೆ ಹೊರತಾಗಿದೆ.

05ರಿಂದ 09 ಒಂಟೆಗಳ ತನಕ ಒಂದು ಆಡು

10ರಿಂದ 14 ಒಂಟೆಗಳ ತನಕ ಎರಡು ಆಡು

15ರಿಂದ 19 ಒಂಟೆಗಳ ತನಕ ಮೂರು ಆಡು

20ರಿಂದ 24 ಒಂಟೆಗಳ ತನಕ ನಾಲ್ಕು ಆಡು

25ರಿಂದ 35 ಒಂಟೆಗಳ ತನಕ ಒಂದು ವರ್ಷದ ಒಂದು ಒಂಟೆ

36ರಿಂದ 45 ಒಂಟೆಗಳ ತನಕ ಎರಡು ವರ್ಷ ತುಂಬಿ ಮೂರನೆಯ ವರ್ಷಕ್ಕೆ ಕಾಲಿಟ್ಟ ಒಂದು ಒಂಟೆ.

46ರಿಂದ 60 ಒಂಟೆಗಳ ತನಕ ಮೂರು ವರ್ಷ ತುಂಬಿ ನಾಲ್ಕನೆಯ ವರ್ಷಕ್ಕೆ ಕಾಲಿಟ್ಟ ಒಂದು ಒಂಟೆ.

61ರಿಂದ 75 ಒಂಟೆಗಳ ತನಕ ನಾಲ್ಕು ವರ್ಷ ತುಂಬಿ ಐದನೆಯ ವರ್ಷಕ್ಕೆ ಕಾಲಿಟ್ಟ ಒಂದು ಒಂಟೆ.

76ರಿಂದ 90 ಒಂಟೆಗಳ ತನಕ ಎರಡು ವರ್ಷ ತುಂಬಿ ಮೂರನೆಯ ವರ್ಷಕ್ಕೆ ಕಾಲಿಟ್ಟ ಎರಡು ಒಂಟೆಗಳು.

91ರಿಂದ 120 ಒಂಟೆಗಳ ತನಕ ಮೂರು ವರ್ಷ ತುಂಬಿ ನಾಲ್ಕನೆಯ ವರ್ಷಕ್ಕೆ ಕಾಲಿಟ್ಟ ಮೂರು ಒಂಟೆಗಳು.

ಒಂಟೆಗಳು 120ಕ್ಕಿಂತ ಹೆಚ್ಚಾದಾಗ ಪ್ರತಿ 40 ಒಂಟೆಗಳಿಗೆ ಎರಡು ವರ್ಷದ ಒಂದು ಒಂಟೆ ಮತ್ತು ಪ್ರತಿ 50 ಒಂಟೆಗಳಿಗೆ ಮೂರು ವರ್ಷದ ಒಂದು ಒಂಟೆಯನ್ನು ಝಕಾತ್ ಕೊಡಬೇಕು. (ಬುಖಾರಿ, ಅಬೂ ದಾವೂದ್, ತಿರ್ಮಿದಿ)

ಈ ವರದಿಯ ಪ್ರಕಾರ 121ರಿಂದ 129ರ ತನಕದ ಒಂಟೆಗಳಿಗೆ 120ರ ಝಕಾತೇ ಅನ್ವಯವಾಗುವುದು. 130ರಿಂದ 139 ಒಂಟೆಗಳ ತನಕ ಎರಡು ವರ್ಷದ ಎರಡು ಒಂಟೆಗಳು ಮತ್ತು ಮೂರು ವರ್ಷದ ಒಂದು ಒಂಟೆ ಝಕಾತ್ ಆಗಿರುವುದು. (40x2=80+50=130) 140 ರಿಂದ 149 ಒಂಟೆಗಳ ತನಕ ಮೂರು ವರ್ಷದ ಎರಡು ಒಂಟೆಗಳು ಮತ್ತು ಎರಡು ವರ್ಷದ ಒಂದು ಒಂಟೆ ಝಕಾತ್ ಆಗಿರುವುದು. (50x2=100+40=140) 150ರಿಂದ 159 ಒಂಟೆಗಳ ತನಕ ಮೂರು ವರ್ಷದ ಮೂರು ಒಂಟೆಗಳು ಝಕಾತ್ ಆಗಿರುವುದು. (50x3=150) 160 ರಿಂದ 169 ಒಂಟೆಗಳ ತನಕ ಎರಡು ವರ್ಷದ ನಾಲ್ಕು ಒಂಟೆಗಳ ಝಕಾತ್ ಆಗಿರುವುದು. (40x4=160) 170 ರಿಂದ 179 ಒಂಟೆಗಳ ತನಕ ಎರಡು ವರ್ಷದ ಮೂರು ಒಂಟೆಗಳು ಮತ್ತು ಮೂರು ವರ್ಷದ ಒಂದು ಒಂಟೆ ಝಕಾತ್ ಆಗಿರುವುದು. (40x3=120+50=170) 180 ರಿಂದ 189 ಒಂಟೆಗಳ ತನಕ ಮೂರು ವರ್ಷದ ಎರಡು ಒಂಟೆಗಳು ಮತ್ತು ಎರಡು ವರ್ಷದ ಎರಡು ಒಂಟೆಗಳು ಝಕಾತ್ ಆಗಿರುವುದು.(50x2=100+40x2=180) 190 ರಿಂದ 199 ಒಂಟೆಗಳ ತನಕ ಮೂರು ವರ್ಷದ ಮೂರು ಒಂಟೆಗಳು ಮತ್ತು ಎರಡು ವರ್ಷದ ಒಂದು ಒಂಟೆ ಝಕಾತ್ ಆಗಿರುವುದು. (50x3=150+40=190) 200 ಒಂಟೆಗಳಿದ್ದರೆ ಮೂರು ವರ್ಷದ ನಾಲ್ಕು ಒಂಟೆಗಳು ಅಥವಾ ಎರಡು ವರ್ಷಗಳ ಐದು ಒಂಟೆಗಳು ಝಕಾತ್ ಆಗಿರುವುದು. (40x5=200 ಅಥವಾ 50x4=200) (ನೈಲುಲ್ ಔತಾರ್ ಭಾಗ-4, ಪುಟ:190)

ಇದು ಶಾಫಿಈ, ಮಾಲಿಕಿ ಮತ್ತು ಹಂಬಲಿ ಮದ್‌ಹಬ್‌ನ ಅಭಿಪ್ರಾಯವಾಗಿದೆ. ಹನಫೀಗಳ ಪ್ರಕಾರ 120ರ ನಂತರ ಕಡ್ಡಾಯವಾಗುವ ಸಂಖ್ಯೆಯನ್ನು ಆರಂಭದಿಂದಲೇ ಲೆಕ್ಕ ಹಾಕಲಾಗುವುದು. ಅರ್ಥಾತ್: ಅವರ ಪ್ರಕಾರ 124 ಒಂಟೆಗಳ ತನಕ 120ಕ್ಕೆ ಕೊಡುವ ಝಕಾತೇ ಆಗಿರುವುದು. 125 ರಿಂದ 129 ಒಂಟೆಗಳ ಝಕಾತ್ ಮೂರು ವರ್ಷದ ಎರಡು ಒಂಟೆಗಳು ಮತ್ತು ಒಂದು ಆಡು ಆಗಿರುವುದು. 130 ರಿಂದ 134 ಒಂಟೆಗಳ ತನಕ ಮೂರು ವರ್ಷದ ಎರಡು ಒಂಟೆಗಳು ಮತ್ತು ಎರಡು ಆಡುಗಳು ಝಕಾತ್ ಆಗಿರುವುದು. 135 ರಿಂದ 139 ಒಂಟೆಗಳ ತನಕ ಮೂರು ವರ್ಷದ ಎರಡು ಒಂಟೆಗಳು ಮತ್ತು ಮೂರು ಆಡುಗಳು ಝಕಾತ್ ಆಗಿರುವುದು. 140 ರಿಂದ 144 ಒಂಟೆಗಳ ತನಕ ಮೂರು ವರ್ಷದ ಎರಡು ಒಂಟೆಗಳು ಮತ್ತು ನಾಲ್ಕು ಆಡುಗಳು ಝಕಾತ್ ಆಗಿರುವುದು. 145 ರಿಂದ 149 ಒಂಟೆಗಳ ತನಕ ಮೂರು ವರ್ಷದ ಎರಡು ಒಂಟೆಗಳು ಝಕಾತ್ ಆಗಿರುವುದು. 150 ಒಂಟೆಗಳಿಗೆ ಮೂರು ವರ್ಷದ ಮೂರು ಒಂಟೆಗಳು ಝಕಾತ್ ಆಗಿರುವುದು. ಇದರ ನಂತರ ಕಡ್ಡಾಯ ಸಂಖ್ಯೆಯನ್ನು ಹಾಗೆಯೇ

ಪುನರಾವರ್ತಿಸಲಾಗುವುದು. ಪ್ರತಿ ಐದು ಒಂಟೆಗಳ ಹೆಚ್ಚಳಕ್ಕೆ ಒಂದು ಆಡಿನ ಹೆಚ್ಚಳವಾಗುವುದು. ಅನಂತರ 175ರಿಂದ 185 ಒಂಟೆಗಳ ತನಕ ಮೂರು ವರ್ಷದ ಮೂರು ಒಂಟೆಗಳು ಮತ್ತು ಒಂದು ವರ್ಷದ ಒಂದು ಒಂಟೆ ಝಕಾತ್ ಆಗಿರುವುದು. 186ರಿಂದ 195 ಒಂಟೆಗಳ ತನಕ ಮೂರು ವರ್ಷದ ಮೂರು ಒಂಟೆಗಳು ಮತ್ತು ಎರಡು ವರ್ಷದ ಒಂದು ಒಂಟೆ ಝಕಾತ್ ಆಗಿರುವುದು. 196 ರಿಂದ 200 ಒಂಟೆಗಳ ತನಕ ಮೂರು ವರ್ಷದ ನಾಲ್ಕು ಒಂಟೆಗಳು ಅಥವಾ ಎರಡು ವರ್ಷದ ಐದು ಒಂಟೆಗಳು ಝಕಾತ್ ಆಗಿರುವುದು. ಅನಂತರ ಕಡ್ಡಾಯದ ಸಂಖ್ಯೆಯನ್ನು ಹಾಗೆಯೇ ಪುನರಾವರ್ತಿಸಲಾಗುವುದು.

(ಬದ್ಲುಲ್ ಮಜ್‌ಹೂದ್ ಭಾಗ-3, ಪುಟ: 10-11)

## 3. ದನ ಮತ್ತು ಎಮ್ಮೆಗಳ ಪ್ರಮಾಣ

ದನಗಳ ಪ್ರಮಾಣದ ಬಗ್ಗೆ ಸರ್ವಸಮ್ಮತವಾದ ಯಾವುದೇ ಪ್ರಾಮಾಣಿಕ ಹದೀಸ್ ವರದಿಯಿಲ್ಲ. ಆದರೆ ಒಂದು ಪ್ರಸಿದ್ಧ ವರದಿಯನ್ನು ಎಲ್ಲರೂ ಅವಲಂಬಿಸುತ್ತಾರೆ. ಹ.ಮುಆದ್ ಬಿನ್ ಜಬಲ್(ರ) ಅವರ ವರದಿಯ ಪ್ರಕಾರ ಒಬ್ಬನ ಬಳಿ 30ಕ್ಕಿಂತ ಕಡಿಮೆ ದನಗಳಿದ್ದರೆ ಆತನ ಮೇಲೆ ಝಕಾತ್ ಕಡ್ಡಾಯವಾಗುವುದಿಲ್ಲ. 30 ಆದರೆ ಒಂದು ವರ್ಷ ಪ್ರಾಯದ ಒಂದು ಕರುವನ್ನು ಝಕಾತ್ ಕೊಡಬೇಕು. 40 ದನಗಳಾದರೆ ಎರಡು ವರ್ಷ ಪ್ರಾಯದ ಒಂದು ಕರುವನ್ನು ಝಕಾತ್ ನೀಡಬೇಕು.

(ಅಹ್ಮದ್, ಅಬೂ ದಾವೂದ್, ತಿರ್ಮಿದಿ, ನಸಾಈ, ಇಬ್ನು ಮಾಜಃ)

## 4. ಆಡು ಮತ್ತು ಕುರಿಗಳ ಪ್ರಮಾಣ

ಪ್ರವಾದಿ(ಸ) ಮತ್ತು ಹ.ಅಬೂಬಕರ್(ರ) ಅವರ ಈ ಹಿಂದೆ ಪ್ರಸ್ತಾಪಿಸಿದ ಪತ್ರದ ಪ್ರಕಾರ ಆಡು-ಕುರಿಗಳ ಪ್ರಮಾಣ ಈ ರೀತಿಯಿದೆ:

40ಕ್ಕಿಂತ ಕಡಿಮೆ ಆಡುಗಳನ್ನು ಹೊಂದಿದವನ ಮೇಲೆ ಯಾವುದೇ ಝಕಾತ್ ಇಲ್ಲ. ಅವನು ತಾನಾಗಿಯೇ ಏನಾದರೂ ಕೊಟ್ಟರೆ ಅದು ಇದಕ್ಕೆ ಹೊರತಾಗಿದೆ. 40ರಿಂದ 120 ಆಡುಗಳವರೆಗೆ ಒಂದು ಆಡನ್ನು ಝಕಾತ್ ನೀಡಬೇಕು. 121 ರಿಂದ 200 ಆಡುಗಳ ತನಕ ಎರಡು ಆಡುಗಳನ್ನು ಝಕಾತ್ ನೀಡಬೇಕು. 201 ರಿಂದ 300ರ ತನಕದ ಆಡುಗಳಿಗೆ ಮೂರು ಆಡುಗಳನ್ನು ಝಕಾತ್ ನೀಡಬೇಕು. 301ರಿಂದ 400ರ ತನಕದ ಆಡುಗಳಿಗೆ 4 ಆಡುಗಳನ್ನು ಝಕಾತ್ ನೀಡಬೇಕು. ಆಡುಗಳ ಸಂಖ್ಯೆ 400ಕ್ಕಿಂತಲೂ ಹೆಚ್ಚಾದರೆ ಪ್ರತಿ 100 ಆಡುಗಳಿಗೆ ಒಂದು ಆಡನ್ನು ಝಕಾತ್ ಆಗಿ ನೀಡಬೇಕು.

(ಬುಖಾರಿ, ದಾರುಕುತ್ನಿ, ಹಾಕಿಮ್, ಅಬೂ ದಾವೂದ್)

## 5. ಜಾನುವಾರುಗಳ ಝಕಾತ್‌ನ ಇತರ ವಿಧಿಗಳು

ಪ್ರವಾದಿವರ್ಯರ(ಸ) ಮತ್ತು ಹ.ಅಬೂಬಕರ್(ರ) ಅವರ ಪತ್ರದಿಂದ ಮತ್ತು ಇತರ

ಕೆಲವು ವರದಿಗಳಿಂದ ಜಾನುವಾರುಗಳ ಝಕಾತ್‌ನ ಕುರಿತು ಈ ಕೆಳಗಿನ ಆದೇಶಗಳು ದೊರೆಯುತ್ತವೆ.

ಝಕಾತ್‌ನಿಂದ ತಪ್ಪಿಸಿಕೊಳ್ಳಲಿಕ್ಕಾಗಿ ಬೇರೆ ಬೇರೆ ವ್ಯಕ್ತಿಗಳಿಗೆ ಸೇರಿದ ಜಾನುವಾರುಗಳನ್ನು ಒಟ್ಟಿಗೆ ಸೇರಿಸುವುದು ಅಥವಾ ಒಬ್ಬನ ಜಾನುವಾರುಗಳನ್ನು ವಿಂಗಡಿಸುವುದು ಧರ್ಮಸಮ್ಮತವಲ್ಲ.

ಉದಾ: ಇಬ್ಬರ ಬಳಿ ತಲಾ 40 ಆಡುಗಳಿದ್ದು ಅವು ಬೇರೆ ಬೇರೆ ಇದ್ದರೆ ಪ್ರತಿಯೊಬ್ಬರೂ ಒಂದು ಆಡನ್ನು ಝಕಾತ್‌ನ ರೂಪದಲ್ಲಿ ಕೊಡಬೇಕಾಗುತ್ತದೆಂದು ಭಾವಿಸಿ ಅವುಗಳನ್ನು ಸೇರಿಸಿ ಇಬ್ಬರ ಕಡೆಯಿಂದ 80 ಆಡುಗಳಿಗೆ ಕೇವಲ ಒಂದೇ ಆಡನ್ನು ಝಕಾತ್‌ನ ರೂಪದಲ್ಲಿ ಕೊಡುವುದು ತಪ್ಪು.

ಝಕಾತ್‌ಗೆ ನೀಡುವ ಜಾನುವಾರು ಮಧ್ಯಮ ದರ್ಜೆಯದ್ದಾಗಿರಬೇಕು. ಝಕಾತ್ ಕೊಡುವವನು ಊನಗ್ರಸ್ತ, ರೋಗಿ ಅಥವಾ ಮುದಿ ಜಾನುವಾರುಗಳನ್ನು ಝಕಾತ್‌ನ ರೂಪದಲ್ಲಿ ಕೊಡಬಾರದು. ಅದೇ ರೀತಿ ಝಕಾತ್ ವಸೂಲಿ ಮಾಡುವವನು ಅವನ ಅತ್ಯುತ್ತಮ ಜಾನುವಾರನ್ನೇ ಆಯ್ದು ವಸೂಲಿ ಮಾಡಬಾರದು. ಆದರೆ ಕೊಡುವಾತ ಸ್ವಯಂ ಅದಕ್ಕೆ ಸಿದ್ಧನಾದರೆ ಅಡ್ಡಿಯಿಲ್ಲ.

## 6. ಝಕಾತ್ ಅನ್ವಯವಾಗದ ಜಾನುವಾರುಗಳು

ಕುದುರೆ, ಹೇಸರಗತ್ತೆ ಮತ್ತು ಕತ್ತೆಗಳ ಮೇಲೆ ಯಾವುದೇ ಝಕಾತ್ ಇಲ್ಲ.

ಪ್ರವಾದಿ(ಸ) ಈ ರೀತಿ ಹೇಳಿರುವರು:

"ಮುಸ್ಲಿಮನ ಮೇಲೆ ಆತನ ಕುದುರೆ ಮತ್ತು ಗುಲಾಮರ ಬಗ್ಗೆ ಯಾವುದೇ ಝಕಾತ್ ಇಲ್ಲ."

(ವರದಿ: ಹ.ಅಬೂ ಹುರೈರಾ(ರ)- ಬುಖಾರಿ, ಮುಸ್ಲಿಮ್, ಅಹ್ಮದ್, ಅಬೂ ದಾವೂದ್, ತಿರ್ಮಿದಿ, ನಸಾಈ, ಇಬ್ನು ಮಾಜಃ)

ಆದರೆ ಕುದುರೆ, ಹೇಸರಗತ್ತೆ ಮತ್ತು ಕತ್ತೆ ವ್ಯಾಪಾರಕ್ಕಾಗಿದ್ದರೆ ಅದರ ಮೇಲೆ ಝಕಾತ್ ಇದೆ ಎಂಬುದು ಒಂದು ಸರ್ವಸಮ್ಮತ ವಿಷಯ.

ಇಮಾಮ್ ಅಬೂ ಹನೀಫಾರ(ರ) ಪ್ರಕಾರ ಕುದುರೆಯಲ್ಲಿ ಹೆಣ್ಣು ಗಂಡುಗಳೆರಡೂ ಇದ್ದರೆ ವಂಶ ವೃದ್ಧಿಯ ಕಾರಣದಿಂದ ಅದರ ಮೇಲೆ ಝಕಾತ್ ಕಡ್ಡಾಯವಾಗುತ್ತದೆ. ಹ. ಜಾಬಿರ್(ರ) ಅವರ ಒಂದು ವರದಿ ಅವರಿಗೆ ಆಧಾರವಾಗಿದೆ.

ಪ್ರವಾದಿ(ಸ) ಈ ರೀತಿ ಹೇಳಿರುವರು:

"ಹುಲ್ಲುಗಾವಲಿನಲ್ಲಿ ಮೇದು ಬೆಳೆಯುವ ಕುದುರೆಯ ಮೇಲೆ ಒಂದು ದೀನಾರ್ ಅಥವಾ 10 ದಿರ್ಹಮ್ ಝಕಾತ್ ಇದೆ." (ದಾರುಕುತ್ನಿ, ಬೈಹಕಿ)

ಈ ವರದಿಯು ದುರ್ಬಲವಾಗಿದೆ ಎಂದು ಹೇಳಿ ಇತರ ಇಮಾಮರು ಇದನ್ನು ಅಂಗೀಕರಿಸುವುದಿಲ್ಲ.

❖❖

# ಸುಪ್ತ ನಿಧಿ ಮತ್ತು ಖನಿಜ ವಸ್ತುಗಳ ಝಕಾತ್

## 1. ಸುಪ್ತ ನಿಧಿ ಮತ್ತು ಖನಿಜ ವಸ್ತುಗಳೆಂದರೇನು?

ಹೆಚ್ಚಿನ ಕರ್ಮಶಾಸ್ತ್ರಜ್ಞರ ಅಭಿಪ್ರಾಯದಂತೆ ಸುಪ್ತ ನಿಧಿ ಮತ್ತು ಖನಿಜ ವಸ್ತುಗಳಲ್ಲಿ ವ್ಯತ್ಯಾಸವಿದೆ. ಸುಪ್ತ ನಿಧಿ ಎಂದರೆ ಹಿಂದಿನ ಕಾಲದ ಜನರು ನೆಲದೊಳಗೆ ಬಚ್ಚಿಟ್ಟ ನಿಧಿ. ಖನಿಜ ವಸ್ತುಗಳೆಂದರೆ ಭೂಮಿಯೊಳಗೆ ಅಲ್ಲಾಹನು ಸೃಷ್ಟಿಸಿರುವ ಲೋಹ, ತೈಲ ಮತ್ತು ಆಮ್ಲಗಳು. ಸುಪ್ತ ನಿಧಿ ಮತ್ತು ಖನಿಜ ವಸ್ತುಗಳ ಈ ವ್ಯತ್ಯಾಸದಿಂದಾಗಿ ಹದೀಸ್‌ನಲ್ಲಿ ಇವೆರಡನ್ನೂ ಒಂದೇ ಸಲ ವಿವರಿಸಿ, ಎರಡಕ್ಕೆ ಬೇರೆ ಬೇರೆ ವಿಧಿಗಳನ್ನು ತಿಳಿಸಲಾಗಿದೆ.

ಪ್ರವಾದಿ(ಸ) ಹೀಗೆ ಹೇಳಿರುವರು:

"ಯಾರಾದರೂ ಜಾನುವಾರುಗಳ ಹಗ್ಗ ಬಿಚ್ಚಿ ಇತರರಿಗೆ ತೊಂದರೆ ಕೊಟ್ಟರೆ ಅದಕ್ಕೆ ಕ್ಷಮೆಯಿದೆ. ಒಬ್ಬನು ಒಂದು ಬಾವಿ ತೋಡಿಸಿ ಇನ್ನೊಬ್ಬ ವ್ಯಕ್ತಿ ಅದರಲ್ಲಿ ಬಿದ್ದು ಬಿಟ್ಟರೆ ಅದಕ್ಕೆ ಕ್ಷಮೆಯಿದೆ. ಒಬ್ಬನು ಇನ್ನೊಬ್ಬನಿಂದ ಮಜೂರಿಯ ಮೇಲೆ ಗಣಿ ತೋಡಿಸಿದರೆ ಮತ್ತು ಅವನು ಅದರಲ್ಲಿ ಸತ್ತರೆ ಅದಕ್ಕೆ ಕ್ಷಮೆಯಿದೆ ಮತ್ತು ಸುಪ್ತ ನಿಧಿಗಳಲ್ಲಿ ಐದನೆಯ ಒಂದಂಶ (1/5) ಝಕಾತ್ ಇದೆ."

(ವರದಿ: ಹ. ಅಬೂ ಹುರೈರಾ(ರ)- ಬುಖಾರಿ, ಮುಸ್ಲಿಮ್, ಅಬೂ ದಾವೂದ್, ನಸಾಈ, ಇಬ್ನು ಮಾಜಃ)

## 2. ಸುಪ್ತ ನಿಧಿ ಮತ್ತು ಖನಿಜದ ಪ್ರಮಾಣ ಹಾಗೂ ಅದರ ಝಕಾತ್

ಸುಪ್ತನಿಧಿಯ ಮೇಲೆ 20ಶೇ. ಝಕಾತ್ ಕಡ್ಡಾಯವಾಗಿದೆ ಎಂಬುದು ಹದೀಸ್‌ನಿಂದ ವ್ಯಕ್ತವಾಗಿ ತಿಳಿಯುತ್ತದೆ. ಆದರೆ ಖನಿಜದ ಝಕಾತ್ ದರವು ಹದೀಸ್‌ನಲ್ಲಿ ಪ್ರಸ್ತಾಪಿಸಲ್ಪಟ್ಟಿಲ್ಲ.

ಶಾಫಿಈ ಕರ್ಮಶಾಸ್ತ್ರಜ್ಞರ ಪ್ರಕಾರ ಸುಪ್ತ ನಿಧಿಯ ಝಕಾತ್ 20 ಶೇ. ಮತ್ತು ಖನಿಜದ ಝಕಾತ್ $2^1/_2$ಶೇ. ಆಗಿದೆ. ಇದು ಬೆಳ್ಳಿ ಮತ್ತು ಬಂಗಾರದ ಝಕಾತ್‌ನ ದರವೇ ಆಗಿದೆ.

ಆದರೆ ಇಮಾಮ್ ಅಬೂ ಹನೀಫಾರವರ(ರ) ಪ್ರಕಾರ ಖನಿಜವು ಸುಪ್ತ ನಿಧಿಯೇ ಆಗಿರುವುದರಿಂದ ಅದರ ಮೇಲೂ 20 ಶೇ. ಝಕಾತ್ ಕಡ್ಡಾಯವಾಗಿದೆ.

ಹದೀಸ್‌ನಲ್ಲಿ ಸುಪ್ತ ನಿಧಿ ಮತ್ತು ಖನಿಜ ಸಂಪತ್ತಿಗೆ ಯಾವುದೇ ಕನಿಷ್ಠ ಪ್ರಮಾಣ ನಿಗದಿಪಡಿಸಲಾಗಿಲ್ಲ. ಆದ್ದರಿಂದ ಇಮಾಮ್ ಅಬೂ ಹನೀಫಾ(ರ) ಪ್ರಕಾರ ಅದಕ್ಕೆ ಯಾವುದೇ ಪ್ರಮಾಣ ನಿಶ್ಚಿತವಿಲ್ಲ. ಆದ್ದರಿಂದ ಅದೆಷ್ಟಿದ್ದರೂ ಝಕಾತ್ ಕೊಡಬೇಕು.

ಆದರೆ ಇಮಾಮ್ ಶಾಫಿಈಯವರ(ರ) ಪ್ರಕಾರ ಖನಿಜ ಸಂಪತ್ತಿಗೆ ಚಿನ್ನ, ಬೆಳ್ಳಿ ಮತ್ತು ನಗದಿನ ಪ್ರಮಾಣವೇ ಅನ್ವಯವಾಗುತ್ತದೆ.

ಖನಿಜ ಸಂಪತ್ತು ಮತ್ತು ಸುಪ್ತನಿಧಿಗೆ ಯಾವುದೇ ಕಾಲ ಮಿತಿಯಿಲ್ಲ. ಅದು ಹೊರ ತೆಗೆದ ಕೂಡಲೇ ಝಕಾತ್ ಕಡ್ಡಾಯವಾಗುತ್ತದೆಂಬುದು ಒಂದು ಸರ್ವಸಮ್ಮತ ವಿಧಿ.

ಇಮಾಮ್ ಅಬೂ ಹನೀಫಾರ(ರ) ಪ್ರಕಾರ ಖನಿಜ ಸಂಪತ್ತಿನ ಝಕಾತನ್ನು ಗನೀಮತ್(ಸಮರಾರ್ಜಿತ) ಸೊತ್ತಿನಂತೆಯೇ ಸರಕಾರವು ತನ್ನ ಅಗತ್ಯಗಳಿಗೆ ಮತ್ತು ಸಾರ್ವಜನಿಕ ಕಾರ್ಯಗಳಿಗೆ ವ್ಯಯಿಸಬಹುದು.

ಇಮಾಮ್ ಶಾಫಿಈ(ರ) ಅವರ ಪ್ರಕಾರ ಅದನ್ನು ಇತರ ಝಕಾತ್‌ನಂತೆಯೇ ವಿತರಿಸಬೇಕು.

ಇಮಾಮ್ ಅಬೂ ಹನೀಫಾ(ರ) ಅವರ ಪ್ರಕಾರ, ಖನಿಜ ಸಂಪತ್ತಿನ ಮೇಲೆ ಮುಸ್ಲಿಮ್-ಮುಸ್ಲಿಮೇತರ ಎಂಬ ಭೇದವಿಲ್ಲದೆ ಎಲ್ಲರಿಂದಲೂ ಝಕಾತ್ ವಸೂಲಿ ಮಾಡಲಾಗುವುದು. ಆದರೆ ಇಮಾಮ್ ಶಾಫಿಈ(ರ) ಅವರ ಪ್ರಕಾರ ಮುಸ್ಲಿಮೇತರರಿಗೆ ಝಕಾತ್ ಅನ್ವಯಿಸುವುದಿಲ್ಲವಾದ್ದರಿಂದ ಅವರಿಂದ ಅದನ್ನು ವಸೂಲಿ ಮಾಡಲಾಗದು.

ಹನಫೀ ಕರ್ಮಶಾಸ್ತ್ರ ಪ್ರಕಾರ ಖನಿಜದ ಮೂರು ವಿಧಗಳಿವೆ-

1. ಚಿನ್ನ, ಬೆಳ್ಳಿ, ಹಿತ್ತಾಳೆ, ತಾಮ್ರ ಮತ್ತಿತರ ಲೋಹಗಳು
2. ಪೆಟ್ರೋಲ್, ಸೀಮೆಎಣ್ಣೆ ಇತ್ಯಾದಿ
3. ರತ್ನಗಳು

ಈ ಮೂರು ವಿಧಗಳಲ್ಲಿ ಝಕಾತ್ ಕೇವಲ ಪ್ರಥಮ ವಿಧದ ಖನಿಜಗಳ ಮೇಲೆ ಕಡ್ಡಾಯವಾಗಿದೆ. ದ್ವಿತೀಯ ಮತ್ತು ತೃತೀಯ ವಿಧದ ಖನಿಜ ಸಂಪತ್ತಿನ ಮೇಲೆ ಯಾವುದೇ ಝಕಾತ್ ಕಡ್ಡಾಯವಲ್ಲ. ಆದರೆ ಪಾದರಸಕ್ಕೆ ಝಕಾತ್ ಅನ್ವಯಿಸುತ್ತದೆ.

❖❖

# ಝಕಾತ್ ಸಂದಾಯ ಮತ್ತು ವಿತರಣೆ

## 1. ಆದಷ್ಟು ಬೇಗ ನೀಡಬೇಕು

ಝಕಾತ್ ಕಡ್ಡಾಯವಾದ ಬಳಿಕ ಅದನ್ನು ಆದಷ್ಟು ಬೇಗ ಪಾವತಿ ಮಾಡಬೇಕು.

ಒಮ್ಮೆ ಪ್ರವಾದಿ(ಸ) ಅಸರ್‌ನ ನಮಾಝ್ ನಿರ್ವಹಿಸಿದರು. ಸಲಾಮ್ ಹೇಳುತ್ತಲೇ ಎದ್ದು ತಮ್ಮ ಮನೆಯ ಕಡೆಗೆ ಹೋದರು. ಮನೆಯಿಂದ ಹೊರ ಬಂದಾಗ ಜನರ ಮುಖಗಳಲ್ಲಿ ಅಚ್ಚರಿಯ ಛಾಯೆಯನ್ನು ಕಂಡು ಪ್ರವಾದಿ(ಸ) ಹೀಗೆ ಹೇಳಿದರು: "ನಮ್ಮ ಮನೆಯಲ್ಲಿ ಚಿನ್ನದ ಒಂದು ತುಂಡು ಇದೆ ಎಂದು ನನಗೆ ನಮಾಝ್‌ನಲ್ಲಿ ನೆನಪಾಯಿತು. ಅದು ನಮ್ಮಲ್ಲಿಯೇ ಇರುವ ಸ್ಥಿತಿಯಲ್ಲಿ ರಾತ್ರಿಯಾಗುವುದು ನನಗೆ ಇಷ್ಟವಿರಲಿಲ್ಲ. ಆದ್ದರಿಂದ ನಾನು ಅದನ್ನು ವಿತರಿಸಿ ಬಿಡುವಂತೆ ಆದೇಶಿಸಿ ಬಂದೆ."

(ವರದಿ: ಹ. ಉಕ್ಬಾ ಬಿನ್ ಹಾರಿಸ್(ರ)- ಬುಖಾರಿ, ಅಹ್ಮದ್)

ಪ್ರವಾದಿ(ಸ) ಹೀಗೆ ಹೇಳಿರುವರು:

"ಒಂದು ಸೊತ್ತಿನಲ್ಲಿ ಯಾವುದೇ ಝಕಾತ್ ಸೇರಿಕೊಂಡಿದ್ದರೆ ಅದನ್ನು ನಾಶ ಮಾಡದೆ ಬಿಡುವುದಿಲ್ಲ."(ಅರ್ಥಾತ್: ಒಂದು ಸೊತ್ತಿನ ಮೇಲೆ ಝಕಾತ್ ಕಡ್ಡಾಯವಾದರೆ ಅದನ್ನು ಆದಷ್ಟು ಬೇಗ ಪಾವತಿ ಮಾಡಬೇಕು) (ವರದಿ: ಹ. ಆಯಿಶಾ(ರ)- ಬುಖಾರಿ, ಶಾಫಿಈ)

## 2. ಝಕಾತ್ ಮುಂಗಡವಾಗಿ ನೀಡುವುದು

ಝಕಾತನ್ನು ಮುಂಗಡವಾಗಿ ನೀಡುವುದು ಧರ್ಮಸಮ್ಮತವಾಗಿದೆ.

ಹ. ಇಬ್ನ್ ಅಬ್ಬಾಸ್(ರ) ಅವರು ವರ್ಷ ಪೂರ್ತಿಯಾಗುವ ಮೊದಲು ತಮ್ಮ ಝಕಾತನ್ನು ಮುಂಗಡವಾಗಿ ಪಾವತಿಸುವ ಬಗ್ಗೆ ವಿಚಾರಿಸಿದಾಗ ಪ್ರವಾದಿ(ಸ) ಅವರಿಗೆ ಅದರ ಅನುಮತಿ ನೀಡಿದರು.

(ವರದಿ: ಹ.ಅಲೀ(ರ)- ಮುಸ್ಲಿಮ್, ಅಬೂ ದಾವೂದ್, ತಿರ್ಮಿದಿ, ಅಹ್ಮದ್)

## 3. ಝಕಾತ್ ಸಂಗ್ರಹಿಸಿದಲ್ಲಿಯೇ ವಿತರಿಸಬೇಕು

ಹೆಚ್ಚಿನ ಕರ್ಮಶಾಸ್ತ್ರ ಪಂಡಿತರ ಅಭಿಪ್ರಾಯದಂತೆ ಝಕಾತ್ ಎಲ್ಲಿಂದ ಸಂಗ್ರಹಿಸಲಾಗುತ್ತದೋ ಅಲ್ಲಿಯೇ ಅದನ್ನು ವಿತರಿಸಬೇಕು. ಅದನ್ನು ಕಾರಣವಿಲ್ಲದೆ ಬೇರೆಡೆಗೆ ವರ್ಗಾಯಿಸುವುದು ಸರಿಯಲ್ಲ. ಒಂದು ವೇಳೆ ಅಲ್ಲಿ ಅದು ಹೆಚ್ಚಾದರೆ ಮತ್ತು ಬೇರೆಡೆ ಅದರ ಅಗತ್ಯವಿದ್ದರೆ ಅದನ್ನು ಹಾಗೆ ವರ್ಗಾಯಿಸುವುದು ಧರ್ಮಸಮ್ಮತವಾಗಿದೆ.

ನಮ್ಮ ಬಳಿಗೆ ಪ್ರವಾದಿ(ಸ) ಝಕಾತ್ ಸಂಗ್ರಹಿಸಲು ನೇಮಿಸಿದ ಸಿಬ್ಬಂದಿ ಬಂದರು.

ಅವರು ನಮ್ಮ ಧನಿಕರಿಂದ ಝಕಾತ್ ಸಂಗ್ರಹಿಸಿದರು ಮತ್ತು ನಮ್ಮ ಬಡವರಲ್ಲಿ ಅದನ್ನು ವಿತರಿಸಿದರು. ನಾನು ಓರ್ವ ಅನಾಥ ಬಾಲಕನಾಗಿದ್ದೆ. ನನಗೂ ಒಂದು ಒಂಟೆಯನ್ನು ನೀಡಿದರು.

(ವರದಿ: ಹ. ಅಬೂ ಜುಹೈಫಾ(ರ)- ತಿರ್ಮಿದಿ)

ಹ. ಇಮ್ರಾನ್ ಬಿನ್ ಹಸೀನ್‌ರನ್ನು(ರ) ಝಕಾತ್ ಸಂಗ್ರಹದ ಸಿಬ್ಬಂದಿಯಾಗಿ ಮಾಡಿ ಕಳುಹಿಸಲಾಯಿತು. ಅವರು ಹಿಂದೆ ಬಂದಾಗ ಅವರಲ್ಲಿ ಈ ರೀತಿ ವಿಚಾರಿಸಲಾಯಿತು. "ಸೊತ್ತು ಎಲ್ಲಿದೆ?" ಆಗ ಅವರು ಹೇಳಿದರು: "ಸೊತ್ತಿಗಾಗಿ ನೀವು ನನ್ನನ್ನು ರವಾನಿಸಿದ್ದಿರಿ. ನಾನು ಅದನ್ನು ವಸೂಲಿ ಮಾಡಿದೆ- ನಾವು ಪ್ರವಾದಿಯವರ(ಸ) ಕಾಲದಲ್ಲಿ ವಸೂಲು ಮಾಡುವಲ್ಲಿಂದ- ಮತ್ತು ಅದನ್ನು ಅದೇ ರೀತಿ ವಿತರಣೆ ಮಾಡಿದೆ- ನಾವು ಪ್ರವಾದಿಯವರ(ಸ) ಕಾಲದಲ್ಲಿ ವಿತರಣೆ ಮಾಡುತ್ತಿದಲ್ಲಿ." (ಅಬೂ ದಾವೂದ್, ಇಬ್ನು ಮಾಜಃ)

ಪ್ರವಾದಿ(ಸ) ಅವರ ಝಕಾತ್ ಸಂಗ್ರಹಕಾರರು ಇತರೆಡೆಗಳಿಂದ ಝಕಾತ್‌ನ ಸೊತ್ತನ್ನು ಮದೀನಾಕ್ಕೆ ತಂದು ಪ್ರವಾದಿಯವರಿಗೆ(ಸ) ಒಪ್ಪಿಸುತ್ತಿದ್ದರು. ಪ್ರವಾದಿ(ಸ) ಅದನ್ನು ಮುಹಾಜಿರ್ ಮತ್ತು ಅನ್ಸಾರ್‌ಗಳಲ್ಲಿ ವಿತರಿಸುತ್ತಿದ್ದರು ಎಂಬುದೂ ಹದೀಸ್‌ನಿಂದ ಸಾಬೀತಾಗುತ್ತದೆ.

(ನಸಾಈ)

## 4. ಝಕಾತ್ ನೀಡುವಾಗ ದುಆ

ಪ್ರವಾದಿ(ಸ) ಈ ರೀತಿ ಹೇಳಿರುವರು:

ನೀವು ಝಕಾತ್ ನೀಡುವಾಗ ಅದರ ಪುಣ್ಯವನ್ನು ಮರೆಯದಿರಿ. ಅದರ ಪುಣ್ಯವೇನೆಂದರೆ, ನೀವು ಈ ರೀತಿ ಹೇಳಬೇಕು:

اَللّٰهُمَّ اجْعَلْهَا مَغْنَمًا وَّلَا تَجْعَلْهَا مَغْرَمًا۔

ಅಲ್ಲಾಹುಮ್ಮ ಜ್‌ಅಲ್‌ಹಾ ಮಗ್‌ನಮನ್

ವಲಾತಜ್‌ಅಲ್‌ಹಾ ಮಗ್‌ರಮನ್

ಅರ್ಥಾತ್: ಓ ಅಲ್ಲಾಹ್! ನೀನು ಇದನ್ನು ಉಪಯುಕ್ತವಾಗಿ ಮಾಡು. ಇದನ್ನು ಜುಲ್ಮಾನೆಯಾಗಿ ಮಾಡಬೇಡ. (ವರದಿ: ಹ. ಅಬೂ ಹುರೈರಾ(ರ)- ಇಬ್ನು ಮಾಜಃ)

## 5. ಝಕಾತ್ ಸಂಗ್ರಹಿಸುವಾಗಿನ ದುಆ

ಪ್ರವಾದಿಯವರ(ಸ) ಬಳಿ (ಕಡ್ಡಾಯ ಅಥವಾ ಐಚ್ಛಿಕವಾದ) ಯಾವುದೇ ದಾನ ಬಂದಾಗ ಅವರು ಹೀಗೆ ಹೇಳುತ್ತಿದ್ದರು:

اَللّٰهُمَّ صَلِّ عَلٰى آلِ فُلَانٍ۔

ಅಲ್ಲಾಹುಮ್ಮ ಸಲ್ಲಿ ಅಲಾ ಆಲಿ ಫುಲಾನಿನ್

ಓ ಅಲ್ಲಾಹ್! ಆ ಮನೆಯವರ ಮೇಲೆ ನಿನ್ನ ಕರುಣೆಯನ್ನು ವರ್ಷಿಸು.

(ವರದಿ: ಹ. ಅಬ್ದುಲ್ಲಾ ಬಿನ್ ಅಬೀ ಔಫಾ(ರ)- ಬುಖಾರಿ, ಮುಸ್ಲಿಮ್)

❖❖❖❖

# ಝಕಾತ್ ಯಾರಿಗೆ ನೀಡುವುದು ಉತ್ತಮ?

## 1. ಪತಿ

ಹ. ಅಬ್ದುಲ್ಲಾ ಬಿನ್ ಮಸ್‌ಊದ್‌ರ(ರ) ಪತ್ನಿ ಹ.ಝೈನಬ್(ರ) ವರದಿ ಮಾಡುತ್ತಾರೆ: ಒಮ್ಮೆ ಪ್ರವಾದಿ(ಸ) ಮಹಿಳೆಯರನ್ನುದ್ದೇಶಿಸಿ ಹೀಗೆ ಹೇಳಿದರು: "ಮಹಿಳೆಯರೇ! ಸದಕಾ ನೀಡಿರಿ. ನೀವು ನಿಮ್ಮ ಆಭರಣಗಳನ್ನು ಮಾರಿ ನೀಡಿದರೂ ಸರಿಯೆ." ನಾನು ಮನೆಗೆ ಬಂದು (ನನ್ನ ಪತಿ) ಅಬ್ದುಲ್ಲಾ ಬಿನ್ ಮಸ್‌ಊದ್‌ರಲ್ಲಿ(ರ) ಹೀಗೆ ಹೇಳಿದೆ: "ನೀವು ಬಡವರು. ಪ್ರವಾದಿ(ಸ) ನಮಗೆ ಸದಕಾ ನೀಡಲು ಆಜ್ಞಾಪಿಸಿರುವರು. ನೀವು ಪ್ರವಾದಿಯವರ(ಸ) ಬಳಿ ಹೋಗಿ ನಾನು ನಿಮಗೆ ಸದಕಾ ನೀಡಿದರೆ ಅದು ಸಿಂಧುವಾಗುತ್ತದೆಯೆ? ಎಂದು ವಿಚಾರಿಸಿ ಬನ್ನಿ. ಒಂದು ವೇಳೆ ಸಿಂಧುವಾಗದಿದ್ದರೆ ನಾನು ಅದನ್ನು ಬೇರೆಯವರಿಗೆ ನೀಡುವೆನು." "ನೀನೇ ಹೋಗಿ ವಿಚಾರಿಸಿಕೊಂಡು ಬಾ" ಎಂದು ಅಬ್ದುಲ್ಲಾ ಬಿನ್ ಮಸ್‌ಊದ್(ರ) ಹೇಳಿದರು. ನಾನು ಹೋದೆ. ಆಗ ಓರ್ವ ಅನ್ಸಾರಿ ಮಹಿಳೆ ಪ್ರವಾದಿವರ್ಯರ(ಸ) ಬಾಗಿಲಲ್ಲಿ ಇದ್ದರು. ಅವರು ನನ್ನಂತಹದೇ ಸಮಸ್ಯೆಯ ಕುರಿತು ವಿಚಾರಿಸಲು ಬಂದಿದ್ದರು. ನಮಗೆ ಪ್ರವಾದಿವರ್ಯರ(ಸ) ಮುಂದೆ ಹೋಗಿ ವಿಚಾರಿಸಲು ಸಂಕೋಚವಾಯಿತು. ಅಷ್ಟರಲ್ಲಿ ಬಿಲಾಲ್(ರ) ಹೊರ ಬಂದರು. ನಾವು ಅವರಲ್ಲಿ ಹೇಳಿದೆವು: "ಪ್ರವಾದಿವರ್ಯರ(ಸ) ಬಳಿ ಹೋಗಿ ಹೇಳಿ, ಬಾಗಿಲಲ್ಲಿ ಇಬ್ಬರು ಮಹಿಳೆಯರಿದ್ದಾರೆ. ಅವರ ಸದಕಾವನ್ನು ಅವರ ಪತಿಯಂದಿರಿಗೆ ಮತ್ತು ಅವರ ಪೋಷಣೆಯಲ್ಲಿರುವ ಅನಾಥ ಮಕ್ಕಳಿಗೆ ನೀಡಿದರೆ ಅದು ಸಿಂಧುವಾಗುವುದೇ ಎಂದು ಅವರು ವಿಚಾರಿಸುತ್ತಾರೆ. ನಾವು ಯಾರೆಂದೂ ನೀವು ಅವರಿಗೆ ತಿಳಿಸಿ ಬಿಡಿ." ಬಿಲಾಲ್(ರ) ಒಳಗೆ ಹೋಗಿ ಪ್ರವಾದಿವರ್ಯರಲ್ಲಿ ವಿಚಾರಿಸಿದರು. ಪ್ರವಾದಿ(ಸ) ಆ ಮಹಿಳೆಯರು ಯಾರೆಂದು ಕೇಳಿದಾಗ "ಓರ್ವ ಅನ್ಸಾರಿ ಮಹಿಳೆ, ಮತ್ತೊಬ್ಬರು ಝೈನಬ್(ರ)" ಎಂದು ಬಿಲಾಲ್(ರ) ಉತ್ತರಿಸಿದರು. ಯಾವ ಝೈನಬ್ ಎಂದು ಪ್ರವಾದಿ(ಸ) ವಿಚಾರಿಸಿದಾಗ, ಅಬ್ದುಲ್ಲಾ ಬಿನ್ ಮಸ್‌ಊದ್‌ರ(ರ) ಪತ್ನಿ ಎಂದರು. ಆಗ ಪ್ರವಾದಿ(ಸ) ಹೇಳಿದರು: "ಅವರಿಗೆ ಇಮ್ಮಡಿ ಪುಣ್ಯವಿದೆ. ಒಂದು ಸಂಬಂಧದ ಪುಣ್ಯ. ಇನ್ನೊಂದು ದಾನದ ಪುಣ್ಯ."

(ಬುಖಾರಿ, ಮುಸ್ಲಿಮ್)

ಈ ಹದೀಸ್‌ನಲ್ಲಿ ಸದಕಾ ಎಂದಿರುವುದು ಕಡ್ಡಾಯ ಝಕಾತನ್ನು. ಏಕೆಂದರೆ ಅವರ ಸದಕಾ ತಮ್ಮ ಪತಿಯಂದಿರಿಗೆ ನೀಡಿದರೆ ಅದು ಸಿಂಧುವಾಗುವುದೋ ಇಲ್ಲವೋ ಎಂದು ಆ ಮಹಿಳೆಯರು ಪ್ರಶ್ನಿಸಿದ್ದರು ಎಂಬುದು ಇಮಾಮ್ ಶಾಫಿಈ(ರ) ಅವರ ಅಭಿಪ್ರಾಯ. ಆದರೆ ಇಮಾಮ್ ಅಬೂ ಹನೀಫಾರ(ರ) ಪ್ರಕಾರ ಅದು ಐಚ್ಛಿಕ ಸದಕಾ ಆಗಿದ್ದು ಕಡ್ಡಾಯ ಝಕಾತನ್ನು ಮಹಿಳೆ ತನ್ನ ಪತಿಗೆ ನೀಡುವಂತಿಲ್ಲ.

## 2. ತಂದೆ-ತಾಯಿ ಮತ್ತು ಮಕ್ಕಳ ಹೊರತು ಇತರ ಬಂಧುಗಳು

ಪ್ರವಾದಿ(ಸ) ಹೀಗೆ ಹೇಳಿರುವರು: "ಬಡವನಿಗೆ ದಾನ ನೀಡಿದರೆ ಅದು ದಾನ ಮಾತ್ರವಾಗಿದೆ ಮತ್ತು (ಬಡವನಾದ) ಸಂಬಂಧಿಕನಿಗೆ ದಾನ ನೀಡಿದರೆ ಅದು ದಾನವೂ ಆಗಿದೆ. ಬಂಧುತ್ವವನ್ನು ದೃಢಪಡಿಸುವುದೂ ಆಗಿದೆ."

(ವರದಿ: ಹ. ಸಿಲ್ಮಾನ್ ಬಿನ್ ಆಮಿರ್(ರ)- ಅಹ್ಮದ್, ತಿರ್ಮಿದಿ, ಇಬ್ನು ಮಾಜಃ)

## ಝಕಾತ್ ಅಥವಾ ದಾನ ನೀಡಿ ಅದನ್ನು ಖರೀದಿಸುವುದು

ಯಾವುದಾದರೂ ವಸ್ತುವನ್ನು ಝಕಾತ್ ಅಥವಾ ಐಚ್ಛಿಕ ದಾನದ ರೂಪದಲ್ಲಿ ಯಾರಿಗಾದರೂ ನೀಡಿದ ಬಳಿಕ ಅದನ್ನು ಅವನಿಂದ ಖರೀದಿಸುವುದನ್ನು ಹೆಚ್ಚಿನ ಕರ್ಮಶಾಸ್ತ್ರ ಪಂಡಿತರು ಅನಪೇಕ್ಷಣೀಯ(ಮಕ್ರೂಹ್) ಎಂದಿರುವರು.

(ಅಲ್ ಫತ್ಹುರ್ರಬ್ಬಾನೀ ಭಾಗ-9, ಪುಟ:133)

ಹ. ಉಮರ್(ರ) ಒಂದು ಕುದುರೆಯನ್ನು ಅಲ್ಲಾಹನ ಮಾರ್ಗದಲ್ಲಿ ದಾನದ ರೂಪದಲ್ಲಿ ನೀಡಿದರು. ಅದೇ ಕುದುರೆ ಮಾರಾಟವಾಗುವುದನ್ನು ಕಂಡು ಅದನ್ನು ಖರೀದಿಸ ಬಯಸಿದರು. ಹಾಗೂ ಆ ಬಗ್ಗೆ ಪ್ರವಾದಿ(ಸ) ಅವರಲ್ಲಿ ವಿಚಾರಿಸಿದರು. ಆಗ ಪ್ರವಾದಿ(ಸ) ಹೇಳಿದರು: "ಉಮರ್! ನಿಮ್ಮ ಸದಕಾ(ದಾನ)ವನ್ನು ಹಿಂದಕ್ಕೆ ಪಡೆಯಬೇಡಿರಿ."

(ವರದಿ: ಹ. ಅಬ್ದುಲ್ಲಾ ಬಿನ್ ಉಮರ್(ರ)- ಬುಖಾರಿ, ಮುಸ್ಲಿಮ್, ಅಹ್ಮದ್, ಅಬೂ ದಾವೂದ್, ತಿರ್ಮಿದಿ, ನಸಾಈ, ಇಬ್ನು ಮಾಜಃ)

ಬುಖಾರಿ ಮತ್ತು ಮುಸ್ಲಿಮ್‌ನ ಇನ್ನೊಂದು ವರದಿಯಲ್ಲಿ ಪ್ರವಾದಿ ವಚನವು ಹೀಗಿದೆ: "ನಿಮ್ಮ ದಾನವನ್ನು ಹಿಂದಕ್ಕೆ ಪಡೆಯಬೇಡಿರಿ. ಏಕೆಂದರೆ ದಾನವನ್ನು ಹಿಂದಕ್ಕೆ ಪಡೆಯುವವನು ವಾಂತಿ ಮಾಡಿ ಅದನ್ನು ನೆಕ್ಕುವವನಂತೆ."

ಆದರೆ ಇದು ಕೇವಲ ಅಪ್ರಿಯ(ಮಕ್ರೂಹ್) ಎಂಬ ಅರ್ಥದಲ್ಲಿದೆಯೇ ಹೊರತು ನಿಷಿದ್ಧವೆಂಬ ಅರ್ಥದಲ್ಲಿಲ್ಲ. ಏಕೆಂದರೆ ಇನ್ನೊಂದು ಹದೀಸ್‌ನಲ್ಲಿ ಪ್ರವಾದಿ(ಸ) ಈ ರೀತಿ ಹೇಳಿರುವುದಾಗಿ ವರದಿಯಾಗಿದೆ: "ಸ್ಥಿತಿವಂತನಿಗೆ ಸದಕಾ(ದಾನ) ಐದು ಸ್ಥಿತಿಯ ಹೊರತು ಧರ್ಮಸಮ್ಮತವಲ್ಲ... ಆ ಪೈಕಿ ವ್ಯಕ್ತಿಯು ತಾನು ದಾನ ಮಾಡಿದ ವಸ್ತುವನ್ನು ಖರೀದಿಸುವುದಾಗಿದೆ." ಮೇಲಿನ ಹದೀಸ್ ವರದಿ ಮಾಡಿರುವ ಹ. ಅಬ್ದುಲ್ಲಾ ಬಿನ್ ಉಮರ್(ರ) ತಾನು ದಾನ ಮಾಡಿದ ಯಾವುದಾದರೂ ವಸ್ತುವನ್ನು ಖರೀದಿಸಿದರೆ ಅದನ್ನು ತನ್ನಲ್ಲಿರಿಸದೆ ಪುನಃ ದಾನ ಮಾಡಿ ಬಿಡುತ್ತಿದ್ದರು. (ಬುಖಾರಿ)

## ಝಕಾತ್ ವಾರೀಸು ಸೊತ್ತಿನ ರೂಪದಲ್ಲಿ ಸಿಗುವುದು

ಒಬ್ಬನು ಒಂದು ವಸ್ತುವನ್ನು ಝಕಾತ್ ಅಥವಾ ಐಚ್ಛಿಕ ದಾನದ ರೂಪದಲ್ಲಿ ನೀಡಿದ್ದು ಅದೇ ವಸ್ತು ಅವನಿಗೆ ವಾರೀಸು ಸೊತ್ತಿನ ರೂಪದಲ್ಲಿ ಮರಳಿ ದೊರೆತರೆ ಅದು ಅವನಿಗೆ ಧರ್ಮಸಮ್ಮತವಾಗಿದೆ.

ಓರ್ವ ಮಹಿಳೆ ಪ್ರವಾದಿ(ಸ) ಅವರ ಬಳಿಗೆ ಬಂದು ಹೀಗೆ ಹೇಳಿದರು: "ನಾನು ಓರ್ವ ದಾಸಿಯನ್ನು ನನ್ನ ತಾಯಿಗೆ ದಾನವಾಗಿ ನೀಡಿದ್ದೆ. ಅನಂತರ ನನ್ನ ತಾಯಿ ತೀರಿಕೊಂಡರು. ಈಗ ಆ ಸೇವಕಿಯನ್ನು ಅವರು ಅಗಲಿದ್ದಾರೆ." ಆಗ ಪ್ರವಾದಿ(ಸ) ಹೇಳಿದರು: "ನಿಮಗೆ ನಿಮ್ಮ ಪುಣ್ಯ ಸಿಕ್ಕಿತು ಮತ್ತು ಈ ದಾಸಿ ನಿಮ್ಮ ಪಾಲಿಗೆ ವಾರೀಸಿನಲ್ಲಿ ಬಂದಂತಾಗಿದೆ." (ಮುಸ್ಲಿಮ್, ಅಬೂ ದಾವೂದ್, ಅಹ್ಮದ್, ತಿರ್ಮಿದಿ, ನಸಾಈ, ಇಬ್ನು ಮಾಜಃ) ಇದು ಒಂದು ಸರ್ವಸಮ್ಮತ ವಿಧಿಯಾಗಿದೆ. (ಅಲ್ ಫತ್ಹುರ್ರಬ್ಬಾನೀ- ಭಾಗ-9, ಪುಟ:133)

**ಪ್ರಮಾದವಶಾತ್ ಝಕಾತ್ ಅನರ್ಹನಿಗೆ ನೀಡಿದರೆ:** ಹ. ಮುಈನ್ ಬಿನ್ ಯಝೀದ್(ರ) ವರದಿ ಮಾಡುತ್ತಾರೆ. ನನ್ನ ತಂದೆ ಕೆಲವು ದೀನಾರಗಳನ್ನು ದಾನದ ರೂಪದಲ್ಲಿ ತೆಗೆದು ಅದನ್ನು ಮಸೀದಿಯಲ್ಲಿ ಓರ್ವ ವ್ಯಕ್ತಿಯ ಕೈಯಲ್ಲಿ ಕೊಟ್ಟರು. ನಾನು ಬಂದು ಅವರಿಂದ ಆ ದೀನಾರ್ ಪಡಕೊಂಡೆ. ಅದನ್ನು ಪಡಕೊಂಡು ನಾನು ನನ್ನ ತಂದೆಯ ಬಳಿಗೆ ಹೋದೆ. ಆಗ ಅವರು "ನಾನು ನಿನಗೆ ಕೊಡಲು ಬಯಸಿರಲಿಲ್ಲ" ಎಂದರು. ಇತ್ಯರ್ಥಕ್ಕಾಗಿ ಈ ವಿವಾದವನ್ನು ಪ್ರವಾದಿವರ್ಯರ(ಸ) ಬಳಿಗೆ ಕೊಂಡು ಹೋದೆ. ಆಗ ಪ್ರವಾದಿ(ಸ) ನನ್ನ ತಂದೆಯವರನ್ನುದ್ದೇಶಿಸಿ ಹೀಗೆ ಹೇಳಿದರು: "ಓ ಯಝೀದ್! ನೀವು ಯಾವುದರ ಸಂಕಲ್ಪ ಮಾಡಿರುವಿರೋ ಅದು ನಿಮಗಿದೆ." (ಅರ್ಥಾತ್: ನಿಮ್ಮ ಸದಕಾ ಸಂದಾಯವಾಗಿದೆ) ಮತ್ತು ನನ್ನನ್ನುದ್ದೇಶಿಸಿ ಹೀಗೆ ಹೇಳಿದರು: 'ಓ ಮುಈನ್! ನೀವು ಯಾವುದರ ಸಂಕಲ್ಪ ಮಾಡಿರುವಿರೋ ಅದು ನಿಮಗಿದೆ."

(ಬುಖಾರಿ, ಅಹ್ಮದ್)

ಈ ಹದೀಸ್‌ನಲ್ಲಿ ದಾನವೆಂದರೆ ಕಡ್ಡಾಯ ಝಕಾತ್ ಆಗಿದೆಯೋ ಅಥವಾ ಐಚ್ಛಿಕ ದಾನವಾಗಿದೆಯೋ ಎಂಬುದು ವ್ಯಕ್ತವಲ್ಲ.

## ಬಹಿರಂಗವಾಗಿ ನೀಡುವುದು

ಝಕಾತನ್ನು ಬಹಿರಂಗವಾಗಿಯೂ ರಹಸ್ಯವಾಗಿಯೂ ನೀಡಬಹುದಾಗಿದೆ. ಪವಿತ್ರ ಕುರ್‌ಆನಿನಲ್ಲಿ ಹೀಗಿದೆ:

إِن تُبْدُوا الصَّدَقَاتِ فَنِعِمَّا هِيَ ۖ وَإِن تُخْفُوهَا وَ
تُؤْتُوهَا الْفُقَرَاءَ فَهُوَ خَيْرٌ لَّكُمْ

"ನಿಮ್ಮ ದಾನ ಧರ್ಮಗಳನ್ನು ಬಹಿರಂಗವಾಗಿ ಕೊಡುವುದಿದ್ದರೂ ಒಳ್ಳೆಯದೇ, ಆದರೆ ರಹಸ್ಯವಾಗಿ ಬಡ ಬಗ್ಗರಿಗೆ ಕೊಡುವುದು ನಿಮ್ಮ ಪಾಲಿಗೆ ಹೆಚ್ಚು ಉತ್ತಮ." **(2:271)**

ಝಕಾತನ್ನು ಬಹಿರಂಗವಾಗಿಯೂ ಇತರ ದಾನ ಧರ್ಮಗಳನ್ನು ರಹಸ್ಯವಾಗಿಯೂ ನೀಡುವುದು ಉತ್ತಮವೆಂಬುದು ವಿದ್ವಾಂಸರ ಒಮ್ಮತಾಭಿಪ್ರಾಯ.

❖❖

# ಝಕಾತ್ ಪಡೆಯುವುದು ಯಾರಿಗೆ ನಿಷಿದ್ಧ?

## 1. ಸ್ಥಿತಿವಂತ ಮತ್ತು ದುಡಿಯಬಲ್ಲವನು

ಬಡವ ಅಥವಾ ದರಿದ್ರನಲ್ಲದ - ಸ್ಥಿತಿವಂತನಿಗೆ ಹಾಗೂ ಆರೋಗ್ಯವಂತನಾಗಿದ್ದು ದುಡಿಯಬಲ್ಲವನಿಗೆ ಝಕಾತ್ ಪಡೆಯುವುದು ನಿಷಿದ್ಧವಾಗಿದೆ.

ಹ. ಅಬ್ದುಲ್ಲಾ ಬಿನ್ ಅದೀ ಖಿಯಾರ್(ರ) ವರದಿ ಮಾಡುತ್ತಾರೆ- ನನಗೆ ಇಬ್ಬರು ವ್ಯಕ್ತಿಗಳು ಈ ರೀತಿ ತಿಳಿಸಿದರು: ನಾವು ಹಜ್ಜತುಲ್ ವಿದಾದ(ಪ್ರವಾದಿವರ್ಯರ ವಿದಾಯ ಹಜ್ಜ್) ಸಂದರ್ಭದಲ್ಲಿ ಪ್ರವಾದಿವರ್ಯರ(ಸ) ಬಳಿಗೆ ಹೋದೆವು. ಪ್ರವಾದಿ(ಸ) ಝಕಾತ್ ವಿತರಿಸುತ್ತಿದ್ದರು. ನಾವೂ ಅವರಲ್ಲಿ ಬೇಡಿದೆವು. ಆಗ ಪ್ರವಾದಿ(ಸ) ನಮ್ಮ ಕಡೆ ನೋಡಿ ದೃಷ್ಟಿಯನ್ನು ತಗ್ಗಿಸಿದರು. ನಾವು ಆರೋಗ್ಯವಂತರೂ ದೃಢಕಾಯರೂ ಆಗಿರುವುದನ್ನು ಕಂಡರು. ಅವರು ಹೀಗೆ ಹೇಳಿದರು; "ನೀವು ಬಯಸಿದರೆ ನಾನು ನಿಮಗೆ ನೀಡಬಲ್ಲೆ, ಆದರೆ ಈ ಸದಕಾತ್(ಝಕಾತ್)ನಲ್ಲಿ ಸ್ಥಿತಿವಂತರಿಗೆ ಹಾಗೂ ದೃಢಕಾಯರಾಗಿದ್ದು ದುಡಿಯಬಲ್ಲವರಿಗೆ ಯಾವ ಪಾಲೂ ಇಲ್ಲ." (ಎಂಬುದನ್ನು ತಿಳಿಯಿರಿ)

ಹನಫೀ ಕರ್ಮಶಾಸ್ತ್ರದ ಪ್ರಕಾರ ಒಬ್ಬನು ಆರೋಗ್ಯವಂತನಾಗಿದ್ದು ದುಡಿಯಬಲ್ಲವನಾಗಿದ್ದರೂ ಅವನು ಝಕಾತ್ ಮತ್ತು ಸದಕಾ ಪಡೆಯುವುದು ಧರ್ಮಸಮ್ಮತವಾಗಿದೆ. ಆದರೆ ಅವನು ಝಕಾತ್ ಕೊಡಲು ಅರ್ಹವಾದಷ್ಟು ಪ್ರಮಾಣದ ಸೊತ್ತನ್ನು ಹೊಂದಿರಬಾರದು. ಮೇಲಿನ ಹದೀಸ್‌ನಲ್ಲಿ ಅದು ಅಪೇಕ್ಷಣೀಯವಲ್ಲವೆಂದು ಮಾತ್ರ ಹೇಳಲಾಗಿದೆ ಎಂಬುದು ಅವರ ಅಭಿಪ್ರಾಯ. (ಅಬೂ ದಾವೂದ್, ನಸಾಈ)

## 2. ಪ್ರವಾದಿ(ಸ) ಅವರ ಕುಟುಂಬದ ಸದಸ್ಯರು

ಪ್ರವಾದಿ(ಸ) ಅವರ ಕುಟುಂಬದ ಸದಸ್ಯರಿಗೆ ಝಕಾತ್ ಪಡೆಯುವುದು ನಿಷಿದ್ಧವಾಗಿದೆ ಎಂಬುದು ಒಂದು ಸರ್ವಸಮ್ಮತ ವಿಧಿಯಾಗಿದೆ.

ಹ. ಹಸನ್(ರ) ಅವರು ಸದಕಾದ ಹಣ್ಣುಗಳ ಪೈಕಿ ಒಂದು ಹಣ್ಣನ್ನು ಎತ್ತಿ ತಿನ್ನ ತೊಡಗಿದಾಗ ಪ್ರವಾದಿ(ಸ) ಹೇಳಿದರು: "ಅದನ್ನು ಉಗುಳಿ ಬಿಡು. ಅದನ್ನು ಉಗುಳಿ ಬಿಡು. ನಾವು ಸದಕಾ ತಿನ್ನುವುದಿಲ್ಲವೆಂಬುದು ನಿನಗೆ ತಿಳಿದಿಲ್ಲವೆ?"

(ವರದಿ: ಹ. ಅಬೂ ಹುರೈರಾ(ರ)- ಮುಸ್ಲಿಮ್)

ಇನ್ನೊಂದು ವರದಿಯಲ್ಲಿ ಹೀಗಿದೆ:

ಪ್ರವಾದಿ(ಸ) ಹೇಳಿದರು: "ಸದಕಾ(ದಾನ-ಧರ್ಮ) ಮುಹಮ್ಮದ್‌ರ(ಸ) ಗೋತ್ರಕ್ಕೆ ಧರ್ಮಸಮ್ಮತವಲ್ಲ. ಅದು ಜನರ (ಕೈಗಳ) ಧೂಳಾಗಿದೆ."

(ವರದಿ: ಹ. ಅಬೂ ಹುರೈರಾ(ರ)- ಮುಸ್ಲಿಮ್)

ಇಮಾಮ್ ಅಬೂ ಹನೀಫಾ(ರ) ಅವರ ಪ್ರಕಾರ ಮುಹಮ್ಮದ್‌ರ(ಸ) ಗೋತ್ರವೆಂದರೆ ಹಾಶಿಮ್ ಗೋತ್ರ. (ಅಂದರೆ ಹ.ಅಲೀ, ಅಕೀಲ್, ಜಾಫರ್, ಅಬ್ಬಾಸ್ ಮತ್ತು ಹಾರಿಸ್(ರ) ಅವರ ಸಂತತಿ)

ಇಮಾಮ್ ಶಾಫಿಈ(ರ) ಅವರ ಪ್ರಕಾರ ಮುಹಮ್ಮದ್‌ರ(ಸ) ಗೋತ್ರವೆಂದರೆ ಹಾಶಿಮ್ ಗೋತ್ರದ ಜತೆ ಮುತ್ತಲಿಬ್ ಗೋತ್ರವೂ ಸೇರಿದೆ. (ಹಾಶಿಮ್ ಪ್ರವಾದಿ(ಸ) ಅವರ ಮುತ್ತಜ್ಜ ಮತ್ತು ಮುತ್ತಲಿಬ್, ಪ್ರವಾದಿ(ಸ) ಅವರ ಮುತ್ತಜ್ಜನ ಸೋದರರಾಗಿರುವರು.)

(ಅಲ್ ಫತ್ಹುರಬ್ಬಾನೀ, ಭಾಗ-9, ಪುಟ: 82)

ಪ್ರವಾದಿವರ್ಯರ(ಸ) ಕುಟುಂಬದ ಜೀತ ಮುಕ್ತ ಗುಲಾಮರು ಮತ್ತು ಅವರ ಸಂತತಿಯವರೂ ಝಕಾತ್ ಪಡೆಯುವುದು ನಿಷಿದ್ಧವಾಗಿದೆ.

ಪ್ರವಾದಿಯವರಿಂದ(ಸ) ಜೀತ ಮುಕ್ತರಾದ ಗುಲಾಮ ಹ.ಅಬೂ ರಾಫಿಅ್(ರ) ವರದಿ ಮಾಡಿರುತ್ತಾರೆ: ಪ್ರವಾದಿ(ಸ) ಮಖ್‌ಝೂಮ್ ಗೋತ್ರದ ಒಬ್ಬ ವ್ಯಕ್ತಿಯನ್ನು ಝಕಾತ್ ಸಂಗ್ರಹಿಸಲು ಕಳುಹಿಸಿದರು. ಆತ ನನ್ನಲ್ಲಿ ಹೇಳಿದ- "ನೀವೂ ನನ್ನ ಜೊತೆ ಬನ್ನಿ. ನಿಮಗೂ ಪಾಲು ಸಿಗಬಹುದು." ಆಗ ನಾನು ಹೇಳಿದೆ: "ಇಲ್ಲ, ಮೊದಲು ನಾನು ಪ್ರವಾದಿವರ್ಯರ(ಸ) ಬಳಿಗೆ ಹೋಗಿ ಅವರ ಅನುಮತಿ ಪಡೆಯುತ್ತೇನೆ." ಹಾಗೆ ನಾನು ಹೋಗಿ ಪ್ರವಾದಿ ವರ್ಯರಲ್ಲಿ(ಸ) ಅನುಮತಿ ಕೇಳಿದೆ. ಅವರು ಹೇಳಿದರು: "ಸದಕಾ(ದಾನ-ಧರ್ಮ) ನಮಗೆ ಧರ್ಮಸಮ್ಮತವಲ್ಲ. ಜನರ ಗುಲಾಮರು ಕೂಡಾ ಅವರ ಕುಟುಂಬದ ಸದಸ್ಯರೇ ಆಗಿರುತ್ತಾರೆ."

(ಅಬೂ ದಾವೂದ್, ತಿರ್ಮಿದಿ, ನಸಾಈ, ಅಹ್ಮದ್, ಇಬ್ನ್ ಖುಝೈಮ, ಇಬ್ನ್ ಹಿಬ್ಬಾನ್)

ಇಮಾಮ್ ಶಾಫಿಈಯವರ(ರ) ಪ್ರಕಾರ ಪ್ರವಾದಿ(ಸ) ಅವರ ಕುಟುಂಬದ ಜೀತ ಮುಕ್ತ ಆಳುಗಳಿಗೆ ಝಕಾತ್ ಪಡೆಯುವುದು ನಿಷಿದ್ಧವಲ್ಲ. ಏಕೆಂದರೆ ಅವರಿಗೆ ಪ್ರವಾದಿ(ಸ) ಅವರ ಕುಟುಂಬ ಸದಸ್ಯರ ಸ್ಥಾನಮಾನ ಪ್ರಾಪ್ತವಿಲ್ಲ. (ನೈಲುಲ್ ಔತಾರ್ ಭಾಗ - 4, ಪುಟ:149)

ಪ್ರವಾದಿಯವರ(ಸ) ಪತ್ನಿಯರ ಜೀತ ಮುಕ್ತ ಗುಲಾಮರಿಗೆ ಝಕಾತ್ ಪಡೆಯುವುದು ನಿಷಿದ್ಧವಲ್ಲ. ಏಕೆಂದರೆ ಅವರಿಗೆ ಪ್ರವಾದಿ(ಸ) ಅವರ ಕುಟುಂಬ ಸದಸ್ಯರ ಸ್ಥಾನಮಾನ ಪ್ರಾಪ್ತವಿಲ್ಲ.

(ನೈಲುಲ್ ಔತಾರ್ ಭಾಗ-4, ಪುಟ:149)

ಪ್ರವಾದಿ(ಸ) ಮನೆಗೆ ಪ್ರವೇಶಿಸಿ "ತಿನ್ನುವುದಕ್ಕೆ ಏನಾದರೂ ಇದೆಯೇ?" ಎಂದು ವಿಚಾರಿಸಿದರು. ನಾನು ಏನೂ ಇಲ್ಲವೆಂದೆ. ಆದರೆ ನನ್ನ ಜೀತ ಮುಕ್ತ ದಾಸಿಗೆ ದಾನವಾಗಿ ಸಿಕ್ಕಿದ ಆಡಿನ ಒಂದು ತುಂಡು ಮಾಂಸ ಇದೆ. ಅದನ್ನು ಆಕೆ ನಮಗೆ ಉಡುಗೊರೆಯಾಗಿ

ನೀಡಿರುವಳು ಎಂದೂ ಹೇಳಿದೆ. ಆಗ ಪ್ರವಾದಿ(ಸ) ಹೇಳಿದರು: "ಅದನ್ನಿಲ್ಲಿ ತನ್ನಿ. ಅದು ಎಲ್ಲಿಗೆ ತಲಪಬೇಕೋ ಅಲ್ಲಿಗೆ ತಲುಪಿ ಬಿಟ್ಟಿತು."

(ವರದಿ:ಹ. ಜುವೈರಿಯಾ(ರ)- ಮುಸ್ಲಿಮ್, ಅಹ್ಮದ್)

ಇದರಿಂದ ತಿಳಿದು ಬರುವ ಇನ್ನೊಂದು ವಿಧಿ ಏನೆಂದರೆ ಯಾರಿಗೆ ಝಕಾತ್ ಪಡೆಯುವುದು ನಿಷಿದ್ಧವಾಗಿದೆಯೋ ಅವರು ಇತರರಿಗೆ ದಾನವಾಗಿ ಸಿಕ್ಕಿದ ವಸ್ತುವಿನಿಂದ ಉಡುಗೊರೆಯಾಗಿ ಸಿಕ್ಕಿದ ವಸ್ತುವನ್ನು ತಿನ್ನಬಹುದು. ಇದು ಒಂದು ಸರ್ವಸಮ್ಮತ ವಿಧಿ.

(ನೈಲುಲ್ ಔತಾರ್, ಭಾಗ- 4, ಪುಟ: 149)

ಹದೀಸ್‌ನಲ್ಲಿ ಪ್ರವಾದಿಯವರ(ಸ) ಕುಟುಂಬ ಸದಸ್ಯರಿಗೆ ಝಕಾತನ್ನು ಸಂಪೂರ್ಣ ನಿಷಿದ್ಧವೆಂದು ಸಾರಲಾಗಿರುವುದರಿಂದ ಅವರು ತಮ್ಮ ಝಕಾತನ್ನು ಕೂಡಾ ಪರಸ್ಪರರಿಗೆ ಕೊಡುವಂತಿಲ್ಲ. ಹಾಗೆ ಪಡೆಯುವುದು ಕೂಡಾ ನಿಷಿದ್ಧವಾಗಿದೆ. (ಫತ್ಹುಲ್‌ಬಾರಿ)

ಹೆಚ್ಚಿನ ಹನಫೀ ಮತ್ತು ಶಾಫಿಈ ಪಂಡಿತರ ಪ್ರಕಾರ ಹಾಶಿಮ್ ಗೋತ್ರದವರಿಗೆ ಐಚ್ಛಿಕ ಸದಕಾವನ್ನು ಪಡೆಯುವುದು ಧರ್ಮಸಮ್ಮತವಾಗಿದೆ. ಏಕೆಂದರೆ ಹದೀಸ್‌ನಲ್ಲಿ 'ಕೈಗಳ ಧೂಳು' ಎಂದಿರುವುದು ಝಕಾತ್‌ನ ಕುರಿತು ಮಾತ್ರ.

(ಅಲ್ ಫತ್ಹುರ್ರಬ್ಬಾನೀ- ಭಾಗ- 9, ಪುಟ:82)

❖❖

# ಫಿತ್ರ್ ಝಕಾತ್

'ಫಿತ್ರ್' ಎಂಬ ಪದವು 'ಇಫ್ತಾರ್' ಎಂಬ ಮೂಲದಿಂದ ಬಂದಿದೆ. 'ಇಫ್ತಾರ್' ಎಂದರೆ ಉಪವಾಸ ಪಾರಣೆ. 'ಫಿತ್ರ್ ಝಕಾತ್' ಎನ್ನುವುದು ಅದು ರಮಝಾನ್‌ನ ಉಪವಾಸ ವ್ರತ ಪೂರ್ಣಗೊಂಡಾಗ ಕೊಡಲಾಗುವ ದಾನವಾಗಿದೆ. ಅದರ ಆಜ್ಞೆಯು ಪ್ರಥಮ ಬಾರಿಗೆ ಹಿ.ಶ. 2ರ ರಮಝಾನ್ ತಿಂಗಳಲ್ಲಿ ಈದುಲ್ ಫಿತ್ರ್‌ಗೆ ಎರಡು ದಿನ ಇರುವಾಗ ನೀಡಲ್ಪಟ್ಟಿತು.

(ಅಲ್ ಮುಗ್ನೀ)

## 1. ವಿಧಿ

ಹೆಚ್ಚಿನ ಕರ್ಮಶಾಸ್ತ್ರ ಪಂಡಿತರ ಅಭಿಪ್ರಾಯದಂತೆ ಫಿತ್ರ್ ಝಕಾತ್ ಕಡ್ಡಾಯ(ಫರ್ಝ್ ಅಥವಾ ವಾಜಿಬ್) ಆಗಿದೆ.

ಪ್ರವಾದಿ(ಸ) ಅವರು ಖರ್ಜೂರದ ಒಂದು ಸಾಲ್ ಅಥವಾ ಜೋಳದ ಒಂದು ಸಾಲ್ ಫಿತ್ರ್ ಝಕಾತನ್ನು ಪ್ರತಿಯೊಬ್ಬ ಗುಲಾಮ, ಸ್ವತಂತ್ರ, ಸ್ತ್ರೀ, ಪುರುಷ ಹಿರಿಯ, ಕಿರಿಯ ಮುಸ್ಲಿಮನ ಮೇಲೆ ಕಡ್ಡಾಯಗೊಳಿಸಿರುತ್ತಾರೆ.

(ವರದಿ: ಹ. ಇಬ್ನು ಉಮರ್(ರ)- ಬುಖಾರಿ, ಮುಸ್ಲಿಮ್, ಅಬೂ ದಾವೂದ್, ನಸಾಈ, ತಿರ್ಮಿದಿ, ಇಬ್ನು ಮಾಜಃ, ಅಹ್ಮದ್)

## 2. ಔಚಿತ್ಯ

ಫಿತ್ರ್ ಝಕಾತ್‌ನ ಔಚಿತ್ಯವನ್ನು ಈ ಕೆಳಗಿನ ಹದೀಸ್‌ನಲ್ಲಿ ವಿವರಿಸಲಾಗಿದೆ:

ಪ್ರವಾದಿ(ಸ) ಫಿತ್ರ್ ಝಕಾತನ್ನು ಕಡ್ಡಾಯಗೊಳಿಸಿರುವರು. ಉಪವಾಸಿಗರು ನಿರರ್ಥಕ ಮತ್ತು ಅಸಂಬದ್ಧ ಮಾತುಗಳಿಂದ ಮುಕ್ತರಾಗಲಿಕ್ಕಾಗಿ ಮತ್ತು ಬಡವರಿಗೆ (ಈದ್ ದಿವಸ ಸರಿಯಾದ) ಆಹಾರ ದೊರೆಯಲಿಕ್ಕಾಗಿ ಯಾರಾದರೂ ಅದನ್ನು ಈದ್ ನಮಾಝ್‌ಗಿಂತ ಮುಂಚಿತವಾಗಿ ಪಾವತಿ ಮಾಡಿದರೆ ಅದು ಒಂದು ಸ್ವೀಕಾರಾರ್ಹ ದಾನವಾಗಿದೆ. ಯಾರಾದರೂ ಅದನ್ನು ನಮಾಝ್‌ನ ನಂತರ ನೀಡಿದರೆ ಅದು ಇತರ ದಾನಗಳಂತೆಯೇ ಒಂದು ದಾನವಾಗಿದೆ.

(ವರದಿ: ಹ. ಅಬ್ದುಲ್ಲಾ ಬಿನ್ ಅಬ್ಬಾಸ್(ರ)- ಅಬೂ ದಾವೂದ್, ಇಬ್ನು ಮಾಜಃ, ದಾರುಕುತ್ನಿ)

## 3. ಯಾರ ಮೇಲೆ ಕಡ್ಡಾಯ?

ಹೆಚ್ಚಿನ ಕರ್ಮಶಾಸ್ತ್ರ ಪಂಡಿತರ ಅಭಿಪ್ರಾಯದಂತೆ ಫಿತ್ರ್ ಝಕಾತ್ ಪ್ರತಿಯೊಬ್ಬ ಮುಸ್ಲಿಮನ ಮೇಲೆ ಕಡ್ಡಾಯವಾಗಿದೆ. ಅವನು ಸ್ವತಂತ್ರನಾಗಿರಲಿ, ಗುಲಾಮನಾಗಿರಲಿ, ಸ್ತ್ರೀಯಾಗಿರಲಿ, ಪುರುಷನಾಗಿರಲಿ, ಹಿರಿಯನಾಗಿರಲಿ, ಕಿರಿಯನಾಗಿರಲಿ, ಬಡವನಾಗಿರಲಿ, ಬಲ್ಲಿದನಾಗಿರಲಿ.

ಇದುವೇ ಇಮಾಮ್ ಶಾಫಿಈ(ರ) ಅವರ ಅಭಿಮತ. ಅವರ ಪ್ರಕಾರ ಒಬ್ಬನ ಬಳಿ ತನ್ನ ಮತ್ತು ತನ್ನ ಮನೆಯವರ ಒಂದು ದಿನದ (ಈದ್ ದಿನದ) ಆಹಾರಕ್ಕಿಂತ ಅಧಿಕ ಧನವಿದ್ದರೆ ಅವನು ಫಿತ್ರ್ ಝಕಾತ್ ಕಡ್ಡಾಯವಾಗಿ ನೀಡಬೇಕು. ಆದರೆ ಇಮಾಮ್ ಅಬೂ ಹನೀಫಾ(ರ) ಅವರ ಪ್ರಕಾರ ಝಕಾತ್‌ನ ಪ್ರಮಾಣದಷ್ಟು ಸೊತ್ತಿರುವವನ ಮೇಲೆ ಮಾತ್ರ ಫಿತ್ರ್ ಝಕಾತ್ ಕಡ್ಡಾಯವಾಗಿದೆ. ಏಕೆಂದರೆ ಪ್ರವಾದಿ(ಸ) ಈ ರೀತಿ ಹೇಳಿರುವರು: "ಗಿನಾದ(ನಿರಪೇಕ್ಷಿತ) ಸ್ಥಿತಿಯಿಲ್ಲದೆ ಯಾವುದೇ ದಾನವಿಲ್ಲ."

(ವರದಿ: ಹ.ಅಬೂ ಹುರೈರಾ(ರ)- ಬುಖಾರಿ, ಮುಸ್ಲಿಮ್, ಅಬೂ ದಾವೂದ್, ಅಹ್ಮದ್)

## 4. ಫಿತ್ರ್ ಝಕಾತ್‌ನ ಪ್ರಮಾಣ

ಗೋಧಿಯ ಹೊರತು ಇತರೆಲ್ಲ ಧಾನ್ಯಗಳ ಫಿತ್ರ್ ಝಕಾತ್ ಒಬ್ಬನಿಗೆ ಒಂದು 'ಸಾಅ್' ಆಗಿದೆ ಎಂಬುದು ಒಂದು ಸರ್ವಸಮ್ಮತ ವಿಧಿ.

ಇಮಾಮ್ ಶಾಫಿಈ(ರ) ಅವರ ಪ್ರಕಾರ ಗೋಧಿಯ ಫಿತ್ರ್ ಝಕಾತ್ ಕೂಡಾ ಒಂದು 'ಸಾಅ್' ಆಗಿದೆ.

ಇಮಾಮ್ ಅಬೂ ಹನೀಫಾ(ರ) ಅವರ ಪ್ರಕಾರ ಗೋಧಿಯ ಫಿತ್ರ್ ಝಕಾತ್‌ನ ಪ್ರಮಾಣ ಅರ್ಧ 'ಸಾಅ್' ಆಗಿದೆ.

## 5. ಫಿತ್ರ್ ಝಕಾತ್ ಯಾವುದನ್ನೆಲ್ಲಾ ಕೊಡಬಹುದು?

ವಿಭಿನ್ನ ಹದೀಸ್‌ಗಳಲ್ಲಿ ಫಿತ್ರ್ ಝಕಾತ್‌ಗೆ ಆರು ವಸ್ತುಗಳ ಪ್ರಸ್ತಾಪ ಬಂದಿದೆ:

1. ಗೋಧಿ
2. ಜೋಳ
3. ಖರ್ಜೂರ
4. ಒಣ ದ್ರಾಕ್ಷೆ
5. ಗೋಧಿಯ ಹಿಟ್ಟು
6. ಹುರಿದ ಧಾನ್ಯದ ಹುಡಿ(ಸತ್ತೂ)

ಇಮಾಮ್ ಅಬೂ ಹನೀಫಾರ(ರ) ಪ್ರಕಾರ ಅವುಗಳಲ್ಲಿ ಹೆಚ್ಚು ಬೆಲೆ ಬಾಳುವ ವಸ್ತುವನ್ನು ಫಿತ್ರ್ ಝಕಾತ್ ನೀಡುವುದು ಉತ್ತಮವಾಗಿದೆ. ಹನಫೀ ಕರ್ಮಶಾಸ್ತ್ರದಂತೆ ಅವುಗಳ ಮೌಲ್ಯವನ್ನೂ ನೀಡಬಹುದು. ನಗದು ನೀಡುವುದು ಉತ್ತಮವಾಗಿದೆ.

ಇಮಾಮ್ ಶಾಫಿಈಯವರ(ರ) ಪ್ರಕಾರ ಉಶ್ರ್(ಕೃಷಿಯ ಝಕಾತ್) ಅನ್ವಯವಾಗುವ ಯಾವುದೇ ವಸ್ತುವನ್ನು ಫಿತ್ರ್ ಝಕಾತ್‌ನ ರೂಪದಲ್ಲಿ ನೀಡಬಹುದು. ನಗದು ನೀಡುವುದು ಧರ್ಮಸಮ್ಮತವಲ್ಲ.

## 6. ಫಿತ್ರ್ ಝಕಾತ್ ಯಾವಾಗ ಕಡ್ಡಾಯವಾಗುತ್ತದೆ

ಫಿತ್ರ್ ಝಕಾತ್ ರಮಝಾನ್‌ನ ಕೊನೆಯಲ್ಲಿ ಕಡ್ಡಾಯವಾಗುತ್ತದೆಂಬುದು ಒಂದು ಸರ್ವಸಮ್ಮತ ವಿಧಿ.

ಇಮಾಮ್ ಅಬೂ ಹನೀಫಾರ(ರ) ಪ್ರಕಾರ ಈದುಲ್ ಫಿತ್ರ್‌ನ ದಿನ ಫಜ್ರ್‌ನ ಸಮಯ ಆರಂಭವಾದಾಗ ಅದು ಕಡ್ಡಾಯವಾಗುತ್ತದೆ. ಇಮಾಮ್ ಶಾಫಿಈಯವರ(ರ) ಪ್ರಕಾರ ರಮಝಾನ್‌ನ ಕೊನೆಯ ದಿನದ ಸೂರ್ಯ ಅಸ್ತಮಿಸಿದಾಗ ಅಥವಾ ಈದುಲ್ ಫಿತ್ರ್‌ನ ದಿನ ಫಜ್ರ್‌ನ ಸಮಯವಾದಾಗ ಫಿತ್ರ್ ಝಕಾತ್ ಕಡ್ಡಾಯವಾಗುತ್ತದೆ.

## 7. ಯಾವಾಗ ಪಾವತಿಸಬೇಕು

ಫಿತ್ರ್ ಝಕಾತನ್ನು ಈದ್‌ನ ದಿನ ನಮಾಝ್‌ಗಾಗಿ ಹೊರಡುವ ಮುಂಚೆ ನೀಡುವುದು ಉತ್ತಮ. ಜನರು ಈದ್ಗಾಗೆ ನಮಾಝ್‌ಗಾಗಿ ಹೊರಡುವ ಮುಂಚೆ ಫಿತ್ರ್ ಝಕಾತನ್ನು ನೀಡಬೇಕೆಂದು ಪ್ರವಾದಿ(ಸ) ನಮಗೆ ಆದೇಶಿಸಿದ್ದಾರೆ.

(ವರದಿ: ಹ. ಇಬ್ನು ಉಮರ್(ರ)-ಬುಖಾರಿ, ಮುಸ್ಲಿಮ್, ಅಬೂ ದಾವೂದ್, ತಿರ್ಮಿದಿ, ನಸಾಈ, ಅಹ್ಮದ್)

ನಾಲ್ವರು ಇಮಾಮರ ಸಹಿತ ಹೆಚ್ಚಿನ ಕರ್ಮಶಾಸ್ತ್ರ ಪಂಡಿತರ ಅಭಿಪ್ರಾಯದಂತೆ ಈದ್ ನಮಾಝ್‌ನ ನಂತರ ಫಿತ್ರ್ ಝಕಾತ್ ನೀಡುವುದು ಮಕ್ರೂಹ್(ಅನಪೇಕ್ಷಿತ) ಆಗಿದೆ.

## 8. ಫಿತ್ರ್ ಝಕಾತ್ ಮುಂಗಡವಾಗಿ ನೀಡುವುದು

ರಮಝಾನ್ ತಿಂಗಳ ಕೊನೆಯಲ್ಲಿ ಫಿತ್ರ್ ಝಕಾತ್ ಕಡ್ಡಾಯವಾಗುವುದಾದರೂ ಅದನ್ನು ಅದಕ್ಕೆ ಮುಂಚೆ ಮುಂಗಡವಾಗಿ ನೀಡುವುದು ಧರ್ಮಸಮ್ಮತವಾಗಿದೆ.

ಪ್ರವಾದಿ(ಸ) ಅವರು ರಮಝಾನ್‌ನ ಕೊನೆಯಲ್ಲಿ ಫಿತ್ರ್ ಝಕಾತ್ ಕಡ್ಡಾಯ ಗೊಳಿಸಿದರು. ಜನರು ಈ ದಾನವನ್ನು ಈದುಲ್ ಫಿತ್ರ್‌ಗೆ ಒಂದೆರಡು ದಿನ ಮುಂಚಿತವಾಗಿ ಕೊಡುತ್ತಿದ್ದರು.

(ವರದಿ: ಹ. ಇಬ್ನು ಉಮರ್(ರ)- ಬುಖಾರಿ)

ಇಮಾಮ್ ಅಬೂ ಹನೀಫಾರ(ರ) ಪ್ರಕಾರ ಫಿತ್ರ್ ಝಕಾತ್ ರಮಝಾನ್‌ಗೆ ಮುಂಚೆಯೂ ನೀಡಬಹುದಾಗಿದೆ. ಇಮಾಮ್ ಶಾಫಿಈಯವರ(ರ) ಪ್ರಕಾರ ರಮಝಾನ್‌ನ ತಿಂಗಳು ಆರಂಭವಾದ ಬಳಿಕ ಅದನ್ನು ಯಾವಾಗಲೂ ನೀಡಬಹುದು.

(ಅಲ್ ಫತ್‌ಹುರ್ರಬ್ಬಾನೀ ಭಾಗ- 9, ಪುಟ: 152)

## 9. ಫಿತ್ರ್ ಝಕಾತ್‌ನ ವ್ಯಯ

ಝಕಾತನ್ನು ಯಾವೆಲ್ಲ ಕಾರ್ಯಗಳಿಗೆ ವ್ಯಯಿಸಬಹುದೋ ಆ ಎಲ್ಲ ಕಾರ್ಯಗಳಿಗೆ ಫಿತ್ರ್ ಝಕಾತನ್ನು ವ್ಯಯಿಸಬಹುದು. ಆದರೆ ಅದನ್ನು ಬಡವರಿಗೆ ಮತ್ತು ಅಪೇಕ್ಷಿತರಿಗೆ ನೀಡುವುದು ಉತ್ತಮವಾಗಿದೆ.

ಪ್ರವಾದಿ(ಸ) ಅವರು ಫಿತ್ರ್ ಝಕಾತನ್ನು ಕಡ್ಡಾಯಗೊಳಿಸುತ್ತಾ ಹೀಗೆ ಹೇಳಿರುವರು: "ಅಂದು ಅವರನ್ನು ನಿರಪೇಕ್ಷರನ್ನಾಗಿ ಮಾಡಿರಿ."

(ವರದಿ: ಹ.ಇಬ್ನು ಉಮರ್(ರ) ಬೈಹಕಿ, ದಾರುಕುತ್ನಿ)

❖❖

# ಐಚ್ಛಿಕ ದಾನ ಧರ್ಮಗಳು

## 1. ಮಹತ್ವ

ಕುರ್‌ಆನ್ ಮತ್ತು ಹದೀಸ್‌ಗಳಲ್ಲಿ ದಾನ ಧರ್ಮಗಳ ಮಹತ್ವವನ್ನು ವಿವರಿಸಲಾಗಿದೆ. ದಾನ ಧರ್ಮಗಳನ್ನು ಪ್ರೇರೇಪಿಸುವ ಅನೇಕ ಆಯತ್‌ಗಳು ಕುರ್‌ಆನಿನಲ್ಲಿವೆ. ಆ ಪೈಕಿ ಎರಡನ್ನು ಮಾತ್ರ ಇಲ್ಲಿ ಉಲ್ಲೇಖಿಸುತ್ತೇವೆ:

مَثَلُ الَّذِينَ يُنفِقُونَ أَمْوَالَهُمْ فِي سَبِيلِ اللَّهِ كَمَثَلِ حَبَّةٍ أَنبَتَتْ سَبْعَ سَنَابِلَ

فِي كُلِّ سُنبُلَةٍ مِّائَةُ حَبَّةٍ ۗ وَاللَّهُ يُضَاعِفُ لِمَن يَشَاءُ ۗ وَاللَّهُ وَاسِعٌ عَلِيمٌ ﴿٢٦١﴾

"ಅಲ್ಲಾಹನ ಮಾರ್ಗದಲ್ಲಿ ತಮ್ಮ ಸಂಪತ್ತನ್ನು ಖರ್ಚು ಮಾಡುವವರ ಖರ್ಚಿನ ಉಪಮೆಯು ಒಂದು ಕಾಳನ್ನು ಬಿತ್ತಿ ಅದರಿಂದ ಏಳು ತೆನೆಗಳು ಹೊರಟು, ಪ್ರತಿಯೊಂದು ತೆನೆಯಲ್ಲಿ ನೂರು ಕಾಳುಗಳಿರುವಂತಿದೆ. ಇದೇ ರೀತಿಯಲ್ಲಿ ಅಲ್ಲಾಹನು ತಾನುದ್ದೇಶಿಸಿದವನ ಕರ್ಮಗಳಿಗೆ ವೃದ್ಧಿಯನ್ನು ದಯಪಾಲಿಸುತ್ತಾನೆ. ಅವನು ಅತ್ಯಂತ ಉದಾರಿಯೂ ಸರ್ವಜ್ಞನೂ ಆಗಿರುತ್ತಾನೆ." (ಅಲ್‌ಬಕರ: 261)

لَن تَنَالُوا الْبِرَّ حَتَّىٰ تُنفِقُوا مِمَّا تُحِبُّونَ ۚ وَمَا تُنفِقُوا مِن شَيْءٍ فَإِنَّ اللَّهَ بِهِ عَلِيمٌ ﴿٩٢﴾

"ನೀವು ನಿಮಗೆ ಬಹಳ ಪ್ರಿಯವಾಗಿರುವ ವಸ್ತುಗಳನ್ನು (ಅಲ್ಲಾಹನ ಮಾರ್ಗದಲ್ಲಿ) ವ್ಯಯಿಸುವ ತನಕವೂ ಪುಣ್ಯದ ಮಟ್ಟವನ್ನು ತಲಪಲಾರಿರಿ. ನೀವು ಏನೇನು ಖರ್ಚು ಮಾಡುವಿರೋ ಅದರ ಬಗ್ಗೆ ಅಲ್ಲಾಹನು ಅಜ್ಞನಲ್ಲ." (ಆಲಿ ಇಮ್ರಾನ್: 92)

ಪ್ರವಾದಿ(ಸ) ಈ ರೀತಿ ಹೇಳಿರುವರು:

ಈರ್ಷ್ಯೆಯು ಕೇವಲ ಎರಡು ವಿಷಯಗಳಲ್ಲಿರಬಹುದು.

1. ಅಲ್ಲಾಹನು ಸಂಪತ್ತು ನೀಡಿದ್ದು ಅದನ್ನು ಅಲ್ಲಾಹನ ಮಾರ್ಗದಲ್ಲಿ ವ್ಯಯಿಸುವ ಸೌಭಾಗ್ಯ ನೀಡಲ್ಪಟ್ಟ ವ್ಯಕ್ತಿ.

2. ಅಲ್ಲಾಹನು ಧರ್ಮದ ಜ್ಞಾನ(ಹಿಕ್ಮತ್)ವನ್ನು ದಯಪಾಲಿಸಿದ್ದು, ಅದರ ಮೂಲಕ ಜನರ ಮಧ್ಯೆ ತೀರ್ಮಾನ ಮಾಡುತ್ತಾ ಇತರರಿಗೆ ಕಲಿಸುತ್ತಾ ಇರುವಂತಹ ವ್ಯಕ್ತಿ.

(ವರದಿ: ಹ. ಇಬ್ನು ಮಸ್‌ಊದ್(ರ)- ಬುಖಾರಿ, ಮುಸ್ಲಿಮ್)

ಜನರ ಮೇಲೆ ಸೂರ್ಯೋದಯವಾಗುವ ಪ್ರತಿಯೊಂದು ದಿನ ಇಬ್ಬರು ದೇವಚರರು ಇಳಿದು ಬರುತ್ತಾರೆ. ಒಬ್ಬನು ಹೇಳುತ್ತಾನೆ: "ಓ ಅಲ್ಲಾಹ್! (ನಿನ್ನ ಮಾರ್ಗದಲ್ಲಿ) ವ್ಯಯಿಸುವವನಿಗೆ ಸಜ್ಜನ ಸಂತಾನವನ್ನು ದಯಪಾಲಿಸು." ಇನ್ನೊಬ್ಬನು ಹೇಳುತ್ತಾನೆ: "ಜಿಪುಣನಿಗೆ ಅವನ ಸೊತ್ತನ್ನು ಪೋಲು ಮಾಡುವ ಸಂತಾನವನ್ನು ದಯಪಾಲಿಸು."

(ವರದಿ: ಹ.ಅಬೂ ಹುರೈರಾ(ರ)- ಬುಖಾರಿ, ಮುಸ್ಲಿಮ್)

ಯಾವುದೇ ದಾನವು ಯಾವ ಸೊತ್ತನ್ನೂ ಕಡಿಮೆಗೊಳಿಸಲಿಲ್ಲ ಮತ್ತು ಅಲ್ಲಾಹನಲ್ಲಿ ಕ್ಷಮೆ ಯಾಚಿಸಿದವನ ಗೌರವವನ್ನು ಅಲ್ಲಾಹನು ಹೆಚ್ಚಿಸದೆ ಬಿಟ್ಟಿಲ್ಲ. ಅಲ್ಲಾಹನಿಗಾಗಿ ವಿನಮ್ರತೆಯನ್ನು ಕೈಗೊಂಡವನನ್ನು ಅಲ್ಲಾಹನು ಉನ್ನತಗೊಳಿಸದೆ ಬಿಟ್ಟಿಲ್ಲ.

(ವರದಿ: ಹ. ಅಬೂ ಹುರೈರಾ(ರ)- ಮುಸ್ಲಿಮ್)

## 2. ಐಚ್ಛಿಕ ದಾನದ ವಿವಿಧ ರೂಪಗಳು

ದಾನಕ್ಕೆ ಕೇವಲ ಒಂದೇ ರೂಪವಿರುವುದಿಲ್ಲ. ಅದಕ್ಕೆ ಅನೇಕ ರೂಪಗಳಿರಬಹುದು.

ಪ್ರವಾದಿ(ಸ) ಈ ರೀತಿ ಹೇಳಿರುವರು:

ಪ್ರತಿಯೊಬ್ಬ ಮುಸ್ಲಿಮನ ಮೇಲೂ ಸದಕಾ(ದಾನ) ಇದೆ. ಸಹಾಬಿಗಳು ಕೇಳಿದರು: "ಅಲ್ಲಾಹನ ಸಂದೇಶವಾಹಕರೇ! ಒಬ್ಬನ ಬಳಿ ಏನೂ ಇಲ್ಲದಿದ್ದರೆ?" ಪ್ರವಾದಿ(ಸ) ಹೇಳಿದರು: "ಅವನು ತನ್ನ ಕೈಗಳಿಂದ ದುಡಿಯಲಿ. ಅದರಿಂದ ಅವನೂ ಪ್ರಯೋಜನ ಪಡೆಯಲಿ, ದಾನವನ್ನೂ ಮಾಡಲಿ." ಸಹಾಬಿಗಳು ಮತ್ತೆ ಕೇಳಿದರು: "ಅವನಿಗೆ ಹಾಗೆ ಮಾಡಲು ಸಾಧ್ಯವಾಗದಿದ್ದರೆ?" ಪ್ರವಾದಿ(ಸ) ಹೇಳಿದರು: "ಯಾರಾದರೂ ಅಪೇಕ್ಷಿತ ಮತ್ತು ಸಂಕಷ್ಟಕ್ಕೀಡಾದ ವ್ಯಕ್ತಿಗೆ ನೆರವಾಗಲಿ." ಸಹಾಬಿಗಳು ಪುನಃ ಕೇಳಿದರು: "ಅವನಿಗೆ ಹಾಗೆ ಮಾಡಲಿಕ್ಕೂ ಸಾಧ್ಯವಾಗದಿದ್ದರೆ?" ಪ್ರವಾದಿ(ಸ) ಹೇಳಿದರು: "ಅವನು ಒಳಿತನ್ನು ಆಜ್ಞಾಪಿಸಲಿ ಮತ್ತು ಕೆಡುಕಿನಿಂದ ದೂರ ಉಳಿಯಲಿ. ಇದುವೇ ಅವನ 'ಸದಕಾ' ಆಗಿದೆ."

(ವರದಿ: ಹ. ಅಬೂ ಮೂಸಾ ಅಶ್‌ಅರೀ(ರ)- ಬುಖಾರಿ, ಅಹ್ಮದ್)

"ಮೃದುವಾದ ಮಾತು ಸದಕಾ(ದಾನ) ಆಗಿದೆ. ಮನುಷ್ಯನನ್ನು ನಮಾಝ್‌ನ ಕಡೆಗೆ ಒಯ್ಯುವ ಪ್ರತಿಯೊಂದು ಹೆಜ್ಜೆಯೂ ಸದಕಾ(ದಾನ) ಆಗಿದೆ."

(ವರದಿ: ಹ. ಅಬೂ ಹುರೈರಾ(ರ)- ಮುಸ್ಲಿಮ್, ಅಹ್ಮದ್)

"ಪ್ರತಿಯೊಂದು ಪುಣ್ಯ ಕಾರ್ಯ ಸದಕಾ ಆಗಿದೆ. ನೀವು ನಿಮ್ಮ ಸೋದರನ ಜತೆ ನಗುಮುಖದಿಂದ ವರ್ತಿಸುವುದು ಕೂಡಾ ಒಂದು ಪುಣ್ಯ ಕಾರ್ಯವಾಗಿದೆ. ನಿಮ್ಮ ಕೊಡದಿಂದ ಅವನ ಕೊಡಕ್ಕೆ ನೀರು ಹಾಕಿ ಕೊಡುವುದು ಕೂಡಾ ಪುಣ್ಯ ಕಾರ್ಯವಾಗಿದೆ."

(ವರದಿ: ಹ. ಜಾಬಿರ್(ರ)- ಅಹ್ಮದ್, ತಿರ್ಮಿದಿ, ಹಾಕಿಮ್)

"ಮನುಷ್ಯ ಶರೀರದಲ್ಲಿ 360 ಕೀಲುಗಳಿವೆ. ಅವುಗಳ ಪೈಕಿ ಪ್ರತಿಯೊಂದು ಕೀಲಿಗೂ ಸದಕಾ(ದಾನ) ಮಾಡುವುದು ಅವನ ಪಾಲಿಗೆ ಆವಶ್ಯಕವಾಗಿದೆ." ಸಹಾಬಿಗಳು ಕೇಳಿದರು:

"ಅಲ್ಲಾಹನ ಸಂದೇಶವಾಹಕರೇ! ಹಾಗೆ ಮಾಡುವುದು ಯಾರಿಂದ ಸಾಧ್ಯವಾದೀತು?" ಪ್ರವಾದಿ(ಸ) ಹೇಳಿದರು: "ಮಸೀದಿಯಲ್ಲಿ ಕೊಳೆ ಬಿದ್ದಿದ್ದು ಅದನ್ನು ನೀವು ನೀಗಿಸಿದರೆ, ರಸ್ತೆಯಲ್ಲಿ ಉಪದ್ರವಕಾರಿ ವಸ್ತು ಬಿದ್ದಿದ್ದು ಅದನ್ನು ನೀವು ನೀಗಿಸಿದರೆ (ಅದು ಕೂಡಾ ಸದಕಾ ಆಗಿದೆ)- ಒಂದು ವೇಳೆ ನೀವು ಹಾಗೆ ಮಾಡಲಾರಿರಾದರೆ 'ದುಹಾ'ದ (ಸೂರ್ಯೋದಯವಾಗಿ ಒಂದು ಗೇಣು ಏರಿದ ನಂತರದಿಂದ ನಡುನೆತ್ತಿಗೇರುವುದಕ್ಕಿಂತ ಮುಂಚಿನವರೆಗಿನ ಸಮಯ) ಎರಡು ರಕಅತ್ ನಿಮಗೆ ಸಾಕಾಗುವುದು."

(ವರದಿ: ಹ. ಬುರೈದಾ ಅಸ್ಲಮಿ(ರ)- ಅಹ್ಮದ್)

"ನಾನು ಪ್ರವಾದಿ(ಸ) ಅವರಲ್ಲಿ ವಿಚಾರಿಸಿದೆ. ನಾನು ಎಲ್ಲಿಂದ ಸದಕಾ ಮಾಡಲಿ?" ಪ್ರವಾದಿ(ಸ) ಹೇಳಿದರು:

"ನೀವು 'ಅಲ್ಲಾಹು ಅಕ್ಬರ್','ಅಲ್ ಹಮ್ದುಲಿಲ್ಲಾಹ್', 'ಸುಬ್‌ಹಾನಲ್ಲಾಹ್', 'ಲಾ ಇಲಾಹ ಇಲ್ಲಲ್ಲಾಹ್' ಮತ್ತು 'ಅಸ್ತಗ್‌ಫಿರುಲ್ಲಾಹ್' ಎಂದು ಹೇಳುವುದು ಸದಕಾದ ದ್ವಾರಗಳ ಪೈಕಿ ಒಂದಾಗಿದೆ. ಒಳಿತನ್ನು ಆದೇಶಿಸುವುದು, ಕೆಡುಕಿನಿಂದ ತಡೆಯುವುದು, ಜನರು ನಡೆದಾಡುವ ದಾರಿಯಿಂದ ಮುಳ್ಳು, ಎಲುಬು ಅಥವಾ ಕಸಕಡ್ಡಿಗಳನ್ನು ನೀಗಿಸುವುದು, ಅಂಧನಿಗೆ ದಾರಿ ತೋರಿಸುವುದು, ಮೂಕ ಮತ್ತು ಕಿವುಡನಿಗೆ ವಿಷಯ ತಿಳಿಸುವುದು, ಯಾರಾದರೂ ಏನನ್ನಾದರೂ ಹುಡುಕುತ್ತಿದ್ದು ನಿಮಗದು ಗೊತ್ತಿದ್ದರೆ ತಿಳಿಸುವುದು, ಸಂಕಷ್ಟಕ್ಕೀಡಾದ ಮತ್ತು ಸಹಾಯಾರ್ಥಿ ವ್ಯಕ್ತಿಗಳಿಗೆ ನೆರವಾಗುವುದು. ದುರ್ಬಲರನ್ನು ಆಶ್ರಯಕೊಟ್ಟು ಮೇಲೆಬ್ಬಿಸುವುದು(ಅವನ ಕಷ್ಟವನ್ನು ನೀಗಿಸುವುದು)- ಈ ಎಲ್ಲ ಕಾರ್ಯಗಳೂ ನಿಮ್ಮ ಪಾಲಿಗೆ ಸದಕಾ ಆಗಿವೆ. ನೀವು ನಿಮ್ಮ ಪತ್ನಿಯ ಜತೆ ಸಹಶಯನ ನಡೆಸಿದಾಗಲೂ ನಿಮಗೆ ಪುಣ್ಯವಿದೆ.

(ವರದಿ: ಹ. ಅಬೂದರ್ರ್(ರ)- ಅಹ್ಮದ್, ಮುಸ್ಲಿಮ್)

ಒಬ್ಬ ಮುಸ್ಲಿಮನು ಒಂದು ಗಿಡ ನೆಟ್ಟರೆ ಅಥವಾ ಕೃಷಿ ಮಾಡಿದರೆ ಹಾಗೂ ಅದರಿಂದ ಕದ್ದು ಹೋದರೆ ಅಥವಾ ಅದರಿಂದ ಯಾವನೇ ವ್ಯಕ್ತಿ, ಪ್ರಾಣಿ ಅಥವಾ ಇನ್ನಾವುದೇ ವಸ್ತು ಏನಾದರೂ ತಿಂದರೆ ಅದೂ ಅವನ ಪಾಲಿಗೆ ಸದಕಾ ಆಗಿದೆ.

(ವರದಿ: ಹ. ಜಾಬಿರ್(ರ)- ಬುಖಾರಿ)

## 3. ದಾನ ಮಾಡಿ ಮನ ನೋಯಿಸುವುದು ಅಥವಾ ಉಪಕಾರ ಭಾರವಿರಿಸುವುದು

ಯಾರಿಗಾದರೂ ದಾನ ಮಾಡಿ ಅವನ ಮನ ನೋಯಿಸಿದರೆ ಅಥವಾ ಉಪಕಾರ ಭಾರವಿರಿಸಿದರೆ ಆ ದಾನವು ಅಸಿಂಧುವಾಗುತ್ತದೆ. ಅಲ್ಲಾಹನು ಈ ರೀತಿ ಹೇಳಿರುವನು:

يَٰٓأَيُّهَا ٱلَّذِينَ ءَامَنُوا۟ لَا تُبْطِلُوا۟ صَدَقَٰتِكُم بِٱلْمَنِّ وَٱلْأَذَىٰ

"ಓ ಸತ್ಯವಿಶ್ವಾಸಿಗಳೇ! ಉಪಕಾರ ಭಾರವಿರಿಸಿಯೂ ಮನ ನೋಯಿಸಿಯೂ ನಿಮ್ಮ ದಾನ ಧರ್ಮಗಳನ್ನು ನಿಷ್ಫಲಗೊಳಿಸಿಕೊಳ್ಳಬೇಡಿರಿ.

(ಪವಿತ್ರ ಕುರ್‌ಆನ್: 2:264)

ಪ್ರವಾದಿ(ಸ) ಈ ರೀತಿ ಹೇಳಿರುವರು:

"ಮೂವರು ವ್ಯಕ್ತಿಗಳಿದ್ದಾರೆ. ಕಿಯಾಮತ್‌ನ ದಿನ ಅಲ್ಲಾಹನು ಅವರೊಂದಿಗೆ ಮಾತನಾಡಲಾರನು. ಅವರೆಡೆಗೆ ನೋಡಲಾರನು. ಅವರನ್ನು ಪಾವನಗೊಳಿಸಲಾರನು ಮತ್ತು ಅವರಿಗೆ ವೇದನಾಯುಕ್ತ ಯಾತನೆಯಿರುವುದು." ನಾನು ಕೇಳಿದೆ: "ಅಲ್ಲಾಹನ ಸಂದೇಶವಾಹಕರೇ! ಯಾರವರು ನಾಶ ಹೊಂದಿದವರು?" ಪ್ರವಾದಿ(ಸ) ಹೇಳಿದರು: "ದಾನ ಮಾಡಿ ಉಪಕಾರ ಭಾರವಿರಿಸುವವನು, ತನ್ನ ಲುಂಗಿಯನ್ನು (ದರ್ಪದಿಂದ) ಭೂಮಿಯ ಮೇಲೆ ಎಳೆದಾಡುವವನು ಮತ್ತು ಸುಳ್ಳು ಆಣೆ ಹಾಕಿ ತನ್ನ ಸರಕನ್ನು ಮಾರುವವನು."

(ವರದಿ: ಹ.ಅಬೂದರ್(ರ)- ಮುಸ್ಲಿಮ್)

## 4. ನಿಷಿದ್ಧ ಸೊತ್ತಿನ ದಾನ

ದಾನವು ನಿಷಿದ್ಧ ಸಂಪಾದನೆಯಿಂದಾಗಿದ್ದರೆ ಅಲ್ಲಾಹನು ಅದನ್ನು ಸ್ವೀಕರಿಸಲಾರ.

ಪ್ರವಾದಿ(ಸ) ಈ ರೀತಿ ಹೇಳಿರುವರು:

"ಜನರೇ! ಅಲ್ಲಾಹನು ಪರಿಶುದ್ಧನಾಗಿದ್ದಾನೆ. ಅವನು ಶುದ್ಧ ವಸ್ತುಗಳನ್ನು ಮಾತ್ರ ಸ್ವೀಕರಿಸುತ್ತಾನೆ. ಅಲ್ಲಾಹನು ಪ್ರವಾದಿಗಳಿಗೆ ನೀಡಿದ ಆದೇಶವನ್ನೇ ಸತ್ಯವಿಶ್ವಾಸಿಗಳಿಗೂ ನೀಡಿರುವನು. (ಪ್ರವಾದಿಗಳನ್ನುದ್ದೇಶಿಸಿ ಅಲ್ಲಾಹನು ಹೀಗೆ ಹೇಳಿರುವನು)

يَٰٓأَيُّهَا ٱلرُّسُلُ كُلُوا۟ مِنَ ٱلطَّيِّبَٰتِ وَٱعْمَلُوا۟ صَٰلِحًا ۖ إِنِّى بِمَا تَعْمَلُونَ عَلِيمٌ

ಸಂದೇಶವಾಹಕರುಗಳೇ! ಶುದ್ಧ ವಸ್ತುಗಳನ್ನು ಉಣ್ಣಿರಿ ಮತ್ತು ಸತ್ಕರ್ಮಗಳನ್ನು ಮಾಡಿರಿ. ನಿಶ್ಚಯವಾಗಿಯೂ ನೀವು ಮಾಡುವುದೆಲ್ಲವನ್ನೂ ನಾನು ಚೆನ್ನಾಗಿ ಅರಿಯುತ್ತೇನೆ.

(ಪವಿತ್ರ ಕುರ್‌ಆನ್- 23:51)

يَٰٓأَيُّهَا ٱلَّذِينَ ءَامَنُوا۟ كُلُوا۟ مِن طَيِّبَٰتِ مَا رَزَقْنَٰكُمْ

ಸತ್ಯವಿಶ್ವಾಸಿಗಳೇ! ನಾವು ನಿಮಗೆ ನೀಡಿರುವ ಶುದ್ಧ ವಸ್ತುಗಳಿಂದ ತಿನ್ನಿರಿ.

(ಪವಿತ್ರ ಕುರ್‌ಆನ್- 2:172)

ಅನಂತರ ಪ್ರವಾದಿ(ಸ) ಒಬ್ಬ ವ್ಯಕ್ತಿಯ ಕುರಿತು ಪ್ರಸ್ತಾಪಿಸಿದರು. ಆತ ಒಂದು ದೀರ್ಘ ಪ್ರಯಾಣವನ್ನು ಕೈಗೊಳ್ಳುತ್ತಾನೆ. ಅವನ ಸ್ಥಿತಿಯು ಬಹಳ ಸುಸ್ತಾಗಿದೆ. ಅವನ ಮೈಮೇಲೆ ಧೂಳು ಕವಿದಿದೆ. ಆತ ಆಕಾಶದತ್ತ ಕೈಯೆತ್ತಿ ಈ ರೀತಿ ಪ್ರಾರ್ಥಿಸುತ್ತಾನೆ: "ಓ ನನ್ನ ಪ್ರಭೂ! ಓ ನನ್ನ ಪ್ರಭೂ!" ಆದರೆ ಅವನ ಆಹಾರ ನಿಷಿದ್ಧವಾಗಿದೆ. ಅವನ ಪಾನೀಯ ನಿಷಿದ್ಧವಾಗಿದೆ ಮತ್ತು ಅವನ ಉಡುಗೆಯೂ ನಿಷಿದ್ಧವಾಗಿದೆ. ಅವನು ನಿಷಿದ್ಧ ಸಂಪಾದನೆಯಿಂದಲೇ ಬೆಳೆದಿರುವಾಗ ಅವನ ಪ್ರಾರ್ಥನೆ ಸ್ವೀಕೃತವಾಗುವುದಾದರೂ ಹೇಗೆ?" (ಮುಸ್ಲಿಮ್)

## 5. ಪತ್ನಿ ಮತ್ತು ಪತಿಯ ಸೊತ್ತಿನಿಂದ ದಾನ ಮಾಡುವುದು

ಪತಿಯ ಅನುಮತಿಯಿದೆ ಎಂದು ಪತ್ನಿಗೆ ತಿಳಿದಿದ್ದರೆ ಆಕೆ ಆತನ ಸೊತ್ತಿನಿಂದ ದಾನ ಮಾಡಬಹುದು. ಅನ್ಯಥಾ ಇಲ್ಲ.

ಪ್ರವಾದಿ(ಸ) ಈ ರೀತಿ ಹೇಳಿರುವರು:

"ಮಹಿಳೆಯು ಯಾವುದೇ ದುರುದ್ದೇಶವಿಲ್ಲದೆ ತನ್ನ ಮನೆಯ ಆಹಾರದಿಂದ ಖರ್ಚು ಮಾಡಿದರೆ ಆಕೆಗೆ ಆ ಖರ್ಚಿನ ಪ್ರತಿಫಲವಿದೆ. ಆಕೆಯ ಪತಿಗೆ ಅದನ್ನು ಸಂಪಾದಿಸಿದುದರ ಪ್ರತಿಫಲವಿದೆ. ಇಂತಹುದೇ ಪ್ರತಿಫಲವು ಕೋಶಾಧಿಕಾರಿಗೂ ಇದೆ. ಅವರ ಪೈಕಿ ಯಾರೂ ಇನ್ನೊಬ್ಬರ ಪ್ರತಿಫಲವನ್ನು ಕಡಿತಗೊಳಿಸುವುದಿಲ್ಲ.

(ವರದಿ: ಹ. ಆಯಿಶಾ(ರ)- ಬುಖಾರಿ, ತಿರ್ಮಿದಿ)

❖❖❖